ಐಕ್ಯರಂಗ

ವಾರಪತ್ರಿಕೆ

ಭಾರತ ಕಮ್ಯೂನಿಸ್ಟ್ ಪಕ್ಷ [ಮಾರ್ಕ್ಸ್‌ವಾದಿ] ಕರ್ನಾಟಕ ರಾಜ್ಯ ಸಮಿತಿಯ ಮುಖಪತ್ರಿಕೆ

ಸಂಪುಟ 6 | ಸಂಚಿಕೆ 43 | ಅಕ್ಟೋಬರ್ 21, 1984 | ಬೆಲೆ 60 ಪೈಸೆ.

ಸಿ.ಪಿ.ಐ. [ಎಂ] ಕರ್ನಾಟಕ ರಾಜ್ಯ ಸಮಿತಿಯ ಒತ್ತಾಯ

ಬರ ಪರಿಹಾರಕ್ಕೆ ರೂ 50 ಕೋಟಿ ಕೂಡಲೇ ಬಿಡುಗಡೆಯಾಗಲಿ

ಕರ್ನಾಟಕ ರಾಜ್ಯ ಹಗಲೆಲ್ಲ ಬರಗಾಲಕ್ಕೆ ತುತ್ತಾಗುತ್ತಿದೆ. ಇಡೀ ದೇಶದಲ್ಲಿಯೇ ನೀರಾವರಿಗೆ ಅತಿ ಕಡಿಮೆ ಅನುಕೂಲತೆ ಹೊಂದಿರುವ ಕರ್ನಾಟಕ ಮೇಲಿಂದ ಮೇಲೆ ಮಳೆಯ ಅಭಾವಕ್ಕೆ ಒಳಗಾಗುತ್ತಿದೆ. ಮಳೆಯನ್ನು ವರ್ಗೀಕರಿಸುವ ಸಂಶೋಧನ ಕೇಂದ್ರಗಳೇ ಇದನ್ನು ತೋರ್ಪಡಿಸಿವೆ. ರಾಜ್ಯದಲ್ಲಿಯ 70 ತಾಲೂಕುಗಳು ಮಳೆಯಿಲ್ಲದೆ ಅಭಾವ ಪ್ರದೇಶಗಳಾಗಿವೆಂಬುದನ್ನು ಕೇಂದ್ರ ಸರಕಾರವೇ ಒಪ್ಪಿಕೊಂಡಿದೆ. ಇದಲ್ಲದೆ ಇನ್ನೂ 15 ತಾಲೂಕುಗಳು ಅಭಾವಕ್ಕೆ ತುತ್ತಾಗಿವೆಂದು ರಾಜ್ಯ ಸರಕಾರ ಸಾರಿದೆ. ಹೀಗೆ 85 ತಾಲೂಕುಗಳು ಅಂದರೆ ರಾಜ್ಯದ ಅರ್ಧ ಭಾಗ ಗಂಭೀರ ಪರಿಸ್ಥಿತಿಯಲ್ಲಿದೆ.

ಈ ವರ್ಷ 133 ತಾಲೂಕುಗಳಲ್ಲಿಯ 15,052 ಹಳ್ಳಿಗಳು ಅಭಾವಕ್ಕೆ ಒಳಗೊಂಡಿವೆ. 1, 36, 42, 927 ರಷ್ಟು ಜನರು. ಅದರ ಪೈಕಿ 44, 38, 838 ಕೃಷಿ ಕೂಲಿಗಾರರು ಮತ್ತು ಬಡ ರೈತರು ಈ ಪ್ರದೇಶದಲ್ಲಿದ್ದಾರೆ. ಇವರೆಲ್ಲ ಕಠಿಣ ಪರಿಸ್ಥಿತಿಯನ್ನೆದುರಿಸುತ್ತಿದ್ದಾರೆ. ಈ ಜನ ಊರು ಬಿಟ್ಟು ಹೋಗದಂತೆ ಮಾಡಲು ಅವರಿಗೆ ಕೆಲಸ, ಆಹಾರ ಹಾಗೂ ನೀರಿನ ವ್ಯವಸ್ಥೆ ಮಾಡುವುದು ಅತ್ಯಗತ್ಯ.

ಕೇಂದ್ರ ಸಹಾಯ

ಈ ರೀತಿ ಪ್ರಕೃತಿಯ ವಿಕೋಪಕ್ಕೆ ಒಳಪಡುವ ರಾಜ್ಯಗಳಿಗೆ ತುರ್ತಿನ ಧನ ಸಹಾಯ ನೀಡಲಿಕ್ಕೆ ಬ್ರಿಟಿಷ್ ಕಾಲದ ಪರಂಪರೆಯ ಹಳೇ ಪದ್ಧತಿಯನ್ನೇ ಅನುಸರಿಸಲಾಗುತ್ತಿದೆ. ಗಂಭೀರ ಪರಿಸ್ಥಿತಿಯಲ್ಲಿ ಧನ ಸಹಾಯ ಮಾಡುವಲ್ಲಿ ತಡವಾಗುತ್ತಿರುವುದು ಅಸಮರ್ಥನೀಯ. ರಾಜ್ಯ ಸರಕಾರ ಮನವಿ ಸಲ್ಲಿಸಿದ ನಂತರ, ಕೇಂದ್ರ ಸರಕಾರ ತನ್ನ ಮರ್ಜಿಗನುಸಾರ ಪರಿಸ್ಥಿತಿಯನ್ನು ಸಮಕ್ಷಮ ಅಭ್ಯಾಸಮಾಡಿ ವರದಿ ಸಲ್ಲಿಸಲು ಒಂದು ಅಧ್ಯಯನ ತಂಡವನ್ನು ರಾಜ್ಯಕ್ಕೆ ಕಳುಹಿಸಿ, ಅವರ ವರದಿಯ ಆಧಾರದಲ್ಲಿ ರಾಜ್ಯಕ್ಕೆ ಕೊಡತಕ್ಕ ಪರಿಹಾರ ಮೊತ್ತವನ್ನು ನಿರ್ಧರಿಸುವ ಕ್ರಮವನ್ನು ಬಿಟ್ಟುಬಿಡಬೇಕು. ಇಷ್ಟೆಲ್ಲ ಆದ ನಂತರ ಕೇಂದ್ರ ಸರಕಾರ ರಾಜ್ಯ ಸರಕಾರಕ್ಕೆ ನೀಡುವ ಸಹಾಯ ಧನ ಅತ್ಯಲ್ಪ ಸಮುದ್ರದಲ್ಲಿ ಒಂದು ಹನಿಯಂತೆ ಮಾತ್ರ.

ಮಳೆಯ ಪರಿಸ್ಥಿತಿಯನ್ನು ಕಂಡು ಹಿಡಿಯಲಿಕ್ಕೆ ಆಧುನಿಕ ಉಪಕರಣಗಳಿರುವಾಗ, ಮಳೆಯ ಮಾಹಿತಿ ಒದಗಿಸಲು ದೇಶಾದ್ಯಂತ ವ್ಯವಸ್ಥೆ ಇರುವಾಗ ಹಾಗೆಯೇ ಡಿ.ಪಿ.ಎ.ಪಿ. ತಂಡಗಳು –

[8ನೇ ಪುಟ ನೋಡಿ]

ಸುಳ್ಯದಲ್ಲಿ ಪಕ್ಷದ ಕಛೇರಿಯ ಮೇಲೆ ಧಾಳಿ

ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ಮತ್ತು ಪುತ್ತೂರು ತಾಲೂಕುಗಳಲ್ಲಿರುವ ಸಹಸ್ರಾರು ಎಕರೆ ಸರ್ಕಾರಿ ರಬ್ಬರ್ ತೋಟದಲ್ಲಿ ನೂರಕ್ಕೆ ತೊಂಭತ್ತರಷ್ಟು ಸಿಲೋನಿನ ನಿರ್ವಾಸಿತ ಕಾರ್ಮಿಕರಿರುವರು. ರಬ್ಬರ್ ತೋಟದಲ್ಲಿ ದುಡಿಯುವ ಕಾರ್ಮಿಕರು ನಾಲ್ಕು ಕಾರ್ಮಿಕ ಸಂಘಗಳಡಿಯಲ್ಲಿ ಸಂಘಟಿತರಾಗಿದ್ದು, ಈ ಸಂಘಗಳ ಪೈಕಿ ಒಂದು ಸಿ. ಐ. ಟಿ. ಯು. ವಿಗೆ ಸೇರ್ಪಡೆಯಾಗಿದ್ದು ಎರಡು ಸಂಘಗಳು ಕಾಂಗ್ರೆ ಬೆಂಬಲದ ಇಂಟಕ್‌ಗೆ ಸೇರಿದವುಗಳಾಗಿವೆ. ಸಿ ಲೋ ನ್ ನಿರ್ವಾಸಿತರಿಗೆ ನ್ಯಾಯಕ್ಕಾಗಿ ಹೋರಾಡುವಾಗಲೇ ಸಿಲೋನ್ ನಿರ್ವಾಸಿತರು ಮತ್ತು ಸ್ಥಳೀಯರ ಮಧ್ಯೆ ಐಕ್ಯಮತ್ಯ, ಸಾಮರಸ್ಯಕ್ಕಾಗಿ ಸಿ. ಐ. ಟಿ. ಯು.ವಿಗೆ ಸೇರಿದ ಕಾರ್ಮಿಕಸಂಘವು ಶ್ರಮಿಸುತ್ತಾ ಬಂದಿದೆ. ಆದರೆ ಇಂಟಕ್‌ಗೆ ಸೇರಿರುವ ಸಂಘಗಳು ರಬ್ಬರ್ ತೋಟದಲ್ಲಿ ಸಿಲೋನ್ ನಿರ್ವಾಸಿತರಿಗೆ ಮಾತ್ರವೇ ಕೆಲಸ ಕೊಡಬೇಕೆಂಬ, ಸ್ಥಳೀಯರನ್ನು ಮತ್ತು ಸಿಲೋನ್ ನಿರ್ವಾಸಿತರನ್ನೂ ಪರಸ್ಪರ ಎತ್ತಿಕಟ್ಟುವ ಧೋರಣೆಯನ್ನು ಅನುಸರಿಸುತ್ತಾ ಬಂದಿದೆ.

ಇತ್ತೀಚಿಗೆ ನಾಲ್ಕೂ ಯೂನಿಯನ್‌ಗಳು ಸೇರಿ ಜಂಟಿಯಾಗಿ ಬೇಡಿಕೆಗಳನ್ನು ಮುಂದಿಟ್ಟವು. ಈ ಸಂದರ್ಭದಲ್ಲೂ ಸಿ. ಐ. ಟಿ. ಯು. ವಿಗೆ ಸೇರಿರುವ ಮತ್ತು ಇನ್ನೊಂದು ಸಂಘವು ಇಂಟಕ್ ಸಂಘಗಳ ಒಡೆದು ಆಳುವ ನೀತಿಯನ್ನು ವಿ ರೋ ಧಿ ಸಿ ದ್ದು ವು. ಬೇಡಿಕೆಗಳನ್ನು ಮುಂದಿಟ್ಟು ಮೇನೇಜ್‌ಮೆಂಟು ಮಾತುಕತೆಗೆ ಕರೆಯಿತು. ಮಾತುಕತೆಯಲ್ಲಿ ಭಾಗವಹಿಸಿ, ಅದು ಬೇಡಿಕೆಗಳನ್ನು ಈಡೇರಿಸುವುದರಲ್ಲಿ ವಿಫಲವಾದಲ್ಲಿ ಮುಷ್ಕರ ನಡೆಸುವುದೆಂಬ ನಿಲುವೆಯನ್ನು ಸಿ. ಐ. ಟಿ. ಯು.ವಿಗೆ ಸೇರಿದಸಂಘ ಮತ್ತು ಇನ್ನೊಂದು ಸಂಘ ವಹಿಸಿದುವು. ಆದರೆ ಇಂಟಕ್‌ಸಂಘಗಳು ದುರುದ್ದೇಶ ಪೂರ್ವಕವಾಗಿ ಕಾನೂನು ರೀತಿಯಲ್ಲಿ ನೋಟೀಸು ಸಹಾ ಕೊಡದೆ

[8ನೇ ಪುಟ ನೋಡಿ]

ಪ್ರಕಟಣೆ

ಕೆಲವು ಅನಿವಾರ್ಯ ಕಾರಣಗಳಿಂದಾಗಿ "ಐಕ್ಯರಂಗ" ದ ಮುಂದಿನ ಸಂಚಿಕೆ [ಅ. 28] ಪ್ರಕಟವಾಗುವುದಿಲ್ಲ ಓದುಗರು ಮತ್ತು ಏಜೆಂಟರು ದಯವಿಟ್ಟು ಸಹಕರಿಸಿ.

ಗೇಣಿದಾರರಿಗೆ ಉಚಿತ ಭೂಮಿ

ರಾಜ್ಯದ ಬಡ ಗೇಣಿದಾರರಿಗೆ ಅವರ ತಾಬೆಯಲ್ಲಿರುವ ಭೂಮಿಯ ಮಾಲಿಕತ್ವವನ್ನು ಉಚಿತವಾಗಿಯೇ ಕೊಡಲು ರಾಮಕೃಷ್ಣ ಹೆಗಡೆ ಸರಕಾರ ತಾ|| 17ರ ಸಚಿವ ಸಂಪುಟದ ಸಭೆಯಲ್ಲಿ ನಿರ್ಣಯ ಕೈಗೊಂಡಿದೆ. ಈ ನಿರ್ಣಯವನ್ನು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಹಾಗೆಯೇ ಪ್ರಾಂತ ರೈತ ಸಂಘ ಹಾರ್ದಿಕವಾಗಿ ಸ್ವಾಗತ ಮಾಡುತ್ತದೆ.

ಭೂ ಸುಧಾರಣೆಯ ಕಾಯಿದೆಯಂತೆ ಗೇಣಿದಾರರಿಗೆ ಭೂಮಿ ಸಿಕ್ಕಿದ್ದರೂ ಕೂಡ ಪೂರ್ಣ ಮಾಲಿಕತ್ವ ಪಡೆಯಲು ಅವರು ಹಣ ತುಂಬ ಬೇಕಾಗಿತ್ತು. ವಾರ್ಷಿಕ ಕಂತುಗಳಲ್ಲಿ ಪಾವತಿ ಮಾಡಬೇಕಾದ ಆ ಹಣದ ಮೂರು ಕಂತುಗಳು ತಪ್ಪಿದರೆ ಅಂತಹ ಭೂಮಿ ಸರಕಾರದ ವಶಕ್ಕೆ ಬರಬೇಕಾಗುತ್ತಿತ್ತು. ಕಂತು ತುಂಬಲಾರದೆ ಹಲವಾರು ರೈತರು ಭೂಮಿ ಹಕ್ಕನ್ನು ಪಡೆಯಲಾರದವರಾಗಿದ್ದರು. ಈ ನಿರ್ಣಯದಿಂದ ರಾಜ್ಯದ ಸಾಧಾರಣ 8 ಲಕ್ಷ ಬಡ ಗೇಣಿದಾರರಿಗೆ ಭೂಮಿ ಹಕ್ಕು ಸಿಗುತ್ತದೆ.

ದುಡಿಯುವವನೇ ಭೂಮಿಯ ಒಡೆಯನಾಗಬೇಕೆಂಬ ಬೇಡಿಕೆಯನ್ನು ಕಮ್ಯುನಿಸ್ಟ್ ಪಕ್ಷವು ಸ್ವಾತಂತ್ರ್ಯ ಹೋರಾಟದ ಸಮಯದಲ್ಲೇ ಘೋಷಿಸಿತ್ತು. ಅದರ ಪ್ರಯತ್ನದಿಂದಾಗಿಯೇ ಲಾಹೋರ್ ಸಮಾವೇಶದಲ್ಲಿ ಅಖಿಲ ಭಾರತ ಕಾಂಗ್ರೆಸ್ ಸಮಿತಿ ಈ ಸಿದ್ಧಾಂತಕ್ಕೆ ಒಪ್ಪಬೇಕಾಯಿತು. ತಾವು ಅಧಿಕಾರಕ್ಕೆ ಬಂದ ನಂತರ ತಮ್ಮ ವರ್ಗ ಗುಣಕ್ಕನುಸರಿಸಿ ಕೇಂದ್ರ ಮತ್ತು ರಾಜ್ಯಗಳಲ್ಲಿಯ ಕಾಂಗ್ರೆಸ್ ಆಡಳಿತ ತಾವಿತ್ತ ವಚನವನ್ನು ಪೂರೈಸಲು ಹಿಂದೇಟು ಹಾಕಿದವು.

ಕಮ್ಯುನಿಸ್ಟ್ ಪಕ್ಷ ಮತ್ತು ಅಖಿಲ ಭಾರತ ಕಿಸಾನ ಸಭೆಗಳು ಬಂಧನ, ಜೈಲುವಾಸ, ಗೂಂಡಾ - ಪೊಲೀಸರ ದಬ್ಬಾಳಿಕೆ, ಲಾಠಿ ಚಾರ್ಜ್ ಗೋಲೀಬಾರುಗಳನ್ನೆದುರಿಸಿ, ರಕ್ತ - ಬಲಿದಾನಗಳ ಮೂಲಕ ದೇಶಾದ್ಯಂತ ತೀವ್ರ ಹೋರಾಟ ನಡೆಸಿದ ಕಾರಣದಿಂದಾಗಿ ಭೂ ಸುಧಾರಣಾ ಕಾಯಿದೆಗಳು ಬೇರೆ ಬೇರೆ ರಾಜ್ಯಗಳಲ್ಲಿ ಹಂತ ಹಂತವಾಗಿ ಜಾರಿಯಲ್ಲಿ ಬಂದವು. ಆದರೆ ಮೂಲ ಪ್ರಶ್ನೆಗೆ ಅವುಗಳಲ್ಲಿ ಉತ್ತರ ಸಿಗಲಿಲ್ಲ.

ಭೂ ಮಾಲಿಕ ಪದ್ಧತಿಯನ್ನು ಪರಿಹಾರವಿಲ್ಲದೆ ರದ್ದುಗೊಳಿಸಿ ಕೃಷಿ ಕೂಲಿಗಾರರಿಗೂ, ಬಡ ರೈತರಿಗೂ ಧರ್ಮಾರ್ಥವಾಗಿ ಭೂಮಿ ಹಂಚಬೇಕೆಂದು ಪ್ರಾರಂಭದಿಂದಲೂ ನಾವು ಹೋರಾಡುತ್ತ ಬಂದಿರುವುದಲ್ಲದೆ, 1964ರಲ್ಲಿ ಸ್ವೀಕೃತವಾದ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕಾರ್ಯಕ್ರಮದಲ್ಲಿ ಈ ಅಂಶ ಸೇರಿಸಲಾಗಿದೆ.

ಇ. ಎಂ. ಎಸ್. ನಂಬೂದರಿಪಾಡ ಅವರ ನೇತೃತ್ವದಲ್ಲಿ 1957 ರಲ್ಲಿ ಕೇರಳದಲ್ಲಿ ಪ್ರಥಮ ಕಮುನಿಸ್ಟ್ ಸರಕಾರ ಅಧಿಕಾರಕ್ಕೆ ಬಂದಾಗಲೂ ಈ ಘೋಷಣೆಯನ್ನು ಕಾರ್ಯರೂಪದಲ್ಲಿ ತರಲು ಪ್ರಯತ್ನಿಸಲಾಯಿತು.

ಕರ್ನಾಟಕ ರಾಜ್ಯದಲ್ಲಿ 1940 ರಿಂದಲೇ ಕಮ್ಯುನಿಸ್ಟ್ ಪಾರ್ಟಿ ಭೂ ಮಾಲಿಕ ಪದ್ಧತಿಯನ್ನು ರದ್ದುಮಾಡಿ ರೈತರಿಗೆ ಪುಕ್ಕಟೆಯಾಗಿ ಭೂಮಿ ಹಂಚಬೇಕೆಂದು ಚಳುವಳಿ ನಡೆಸುತ್ತಲೇ ಬಂದಿದೆ. ಅನಂತರ ಸ್ಥಾಪಿತವಾದ ಪ್ರಾಂತ ರೈತ ಸಂಘವೂ ಪಾದಯಾತ್ರೆ, ಸತ್ಯಾಗ್ರಹ, ಚಳುವಳಿಗಳ ಮೂಲಕ ತೀವ್ರ ಹೋರಾಟ ನಡೆಸಿತ್ತು. ಕಾರವಾರದ ಗುಬ್ಬುನ್ಯಾಕ ಎಂಬುವರು ರೈತ ಚಳುವಳಿಯಿಂದಾಗಿ ನಾಸಿಕ ಜೈಲಿನಲ್ಲಿ ಸ್ಥಾನಬದ್ಧತೆಯಲ್ಲಿದ್ದು ಜೈಲಿನಲ್ಲಿದ್ದ ಕಮ್ಯುನಿಸ್ಟ್ - ರೈತ ಸಂಘದ ಕೈದಿಗಳು 1950 ರಲ್ಲಿ ಜೈಲಿನಲ್ಲಿ ತಮಗೆ ಸಿಗಬಹುದಾದ ಸೌಲಭ್ಯಗಳು ಸಿಗದ್ದರಿಂದ ಅವುಗಳನ್ನು ಪಡೆಯುವುದಕ್ಕಾಗಿ ಜೈಲಿನೊಳಗೇನೇ ಚಳುವಳಿ ನಡೆಸಿದಾಗ ಪೊಲೀಸರ ಗುಂಡಿಗೆ ಬಲಿಯಾಗಿ ಹುತಾತ್ಮರಾಗಿದ್ದರೆಂಬುದನ್ನು ನೆನಸಿಕೊಳ್ಳಬೇಕು.

ಹೀಗೆ ಕಮ್ಯುನಿಸ್ಟ್ ಪಕ್ಷಗಳ – ಪ್ರಾಂತ ರೈತ ಸಂಘದ ಸತತ ಹೋರಾಟದಿಂದಾಗಿ ದೇವರಾಜ ಅರಸರ ಸರಕಾರ ಗೇಣಿದಾರರಿಗೆ ಭೂಮಿಯ ಹಕ್ಕು ಕೊಡಿಸಿತ್ತು. ಅಂಥವರಿಂದ ಹಣ ವಸೂಲಿ ಮಾಡದೆ ಭೂಮಿಯ ಹಕ್ಕುಪತ್ರ ಕೊಡಬೇಕೆಂದು ಪ್ರಾಂತ ರೈತಸಂಘ ಸಿ. ಪಿ. ಐ (ಎಂ) ಕೇಳುತ್ತಾ ಬಂದಿವೆ. ಈಗ ರಾಮಕೃಷ್ಣ ಹೆಗಡೆ ಸರಕಾರ ಅದಕ್ಕೆ ಒಪ್ಪಿಕೊಂಡಿದೆ.

ಯಾವುದೇ ಸರಕಾರದ ಮೆಹರಬಾನಿಯಿಂದ ಅಥವಾ ಮಾನವತಾ ದೃಷ್ಟಿಯಿಂದ ನಮ್ಮ ರಾಜ್ಯದ 8 ಲಕ್ಷ ರೈತರು ತಾವು ಸಾಗುಮಾಡುವ ಭೂಮಿಯ ಪೂರ್ಣ ಹಕ್ಕನ್ನು ಪಡೆದುದಲ್ಲ. ಸಾವಿರಾರು ರೈತರು ರಕ್ತ ಸುರಿಸಿ, ಜೀವತೆತ್ತು, ನಾನಾ ರೀತಿಯ ದಬ್ಬಾಳಿಕೆಯನ್ನೆದುರಿಸಿದ ಪ್ರತಿಫಲವಾಗಿ ಇಂದು ಈ ಹಕ್ಕು ಸಿಕ್ಕಿರುತ್ತದೆಂಬುದನ್ನು ಮರೆಯಬಾರದು.

[8ನೇ ಪುಟ ನೋಡಿ]

ಸಂಸದೀಯ ಸರಕಾರ ಹಾಗೂ ಅಧ್ಯಕ್ಷೀಯ ಸರಕಾರ

ಒಂದು ಪರಿಶೀಲನೆ

ಮೂಲ : ನ್ಯಾಯಮೂರ್ತಿ ಶ್ರೀ ಹೆಚ್. ಆರ್. ಖನ್ನಾ

ಕನ್ನಡಕ್ಕೆ : ಬೆ. ಕಾ. ಮೂರ್ತೀಶ್ವರಯ್ಯ

[ಕಳೆದ ಸಂಚಿಕೆಯಿಂದ]

[ನಿವೃತ್ತ ನ್ಯಾಯಾಧೀಶರಾದ ಶ್ರೀ ಎಚ್. ಆರ್. ಖನ್ನಾ ಅವರ ಲೇಖನದ ಮೊದಲ ಕಂತನ್ನು ಕಳೆದ ಸಂಚಿಕೆಯಲ್ಲಿ ಪ್ರಕಟಿಸಿದ್ದೆವು. ಈ ಸಂಚಿಕೆಯಲ್ಲಿ ಅದನ್ನು ಅಂತ್ಯಗೊಳಿಸುತ್ತಿದ್ದೇವೆ.]

ಫ್ರೆಂಚ್ ರಾಷ್ಟ್ರಪತಿಯು ರಾಷ್ಟ್ರದ ಮಹಾನ್ ನಾಯಕರು ಹೌದು. 7 ವರ್ಷಗಳ ಅಧಿಕಾರಾವಧಿಯಲ್ಲಿ ಕಚೇರಿಯಿಂದ ಹೊರ ತೆಗೆಯುವಂತಿಲ್ಲ. ಪ್ರಧಾನಿ ಮತ್ತು ರಾಷ್ಟ್ರಪತಿ ತಮ್ಮ ಕಾರ್ಯಕಲಾಪಗಳನ್ನು ನಡೆಸಲು ಸಲಹೆ ನೀಡುವ ಸಲಹಾ ಸಿಬ್ಬಂದಿಯನ್ನು ಹೊಂದಿರುತ್ತಾರೆ. ರಾಷ್ಟ್ರಪತಿಯ ಸಲಹಾ ಸಿಬ್ಬಂದಿ ವರ್ಗದಲ್ಲಿ ವಿದೇಶಿಯ ವ್ಯವಹಾರಗಳಲ್ಲಿ ಆಂತರಿಕ ವ್ಯವಹಾರಗಳಲ್ಲಿ ಕಾನೂನು ಮತ್ತು ಆರ್ಥಿಕ ವ್ಯವಹಾರಗಳಲ್ಲಿ ವಿಶೇಷ ಪರಿಣತಿ ಹೊಂದಿದವರಿರುತ್ತಾರೆ.

1958ರ ಸಂವಿಧಾನದ ಪ್ರಕಾರ ಬಹಳ ಗುರುತರವಾದ ಸಂವಿಧಾನದ ವಿಧಿ 23ನೆಯದು, ಸಚಿವ ಸಂಪುಟದಲ್ಲಿ ಸೇರಿಕೊಳ್ಳುವ ವ್ಯಕ್ತಿ ಸಂಸತ್ತಿನ ದಲ್ಲಿಸ್ಯತ್ವವನ್ನು ರಾಷ್ಟ್ರೀಯ ಮಟ್ಟದ ಸನ ಯಾವುನೇ ರೀತಿಯ ವ್ಯವಹಾರವನ್ನು ಸಾರ್ವಜನಿಕ ಹುದ್ದೆಯನ್ನು ಅಥವಾ ಯಾವುದೇ ಬಗೆಯ ವೃತ್ತಿಪರ ವ್ಯವಹಾರವನ್ನು ಹೊಂದಿರಬಾರದೆನ್ನುವುದೇ ಈ ವಿಧಿಯ ವೈಶಿಷ್ಟ್ಯ. ಈ ವಿಧಿಯಿಂದಾಗಿ ಸಂಸತ್ತಿನ ಯಾವ ಸದಸ್ಯ ಸರಕಾರದ ಅಧಿಕಾರವನ್ನ ವಹಿಸಿಕೊಳ್ಳುತ್ತಾನೋ, ಆ ಸದಸ್ಯ ಎರಡೂ ಸದನಗಳಲ್ಲಿ ತನ್ನ ಸದಸ್ವತ್ವ ಎಲ್ಲಿದೆಯೋ ಅಲ್ಲಿ ತನ್ನ ಸದಸ್ಯತ್ವವನ್ನು ತೆರವು ಮಾಡಬೇಕಿರುತ್ತದೆ. ಈ ವಿಧಿ ಅನ್ವಯ ಸರಕಾರದಲ್ಲಿ, ಸಚಿವ ಸ್ಥಾನವನ್ನು ಪಡೆಯಲೋಸುಗ ಸರಕಾರವನ್ನು ಉರುಳಿಸಬೇಕೆಂಬ ಪ್ರಲೋಭನೆಗೆ ಒಳಗಾಗುವುದಿಲ್ಲ. ಮಾಜಿ ಸಚಿವರು, ಸಂಸತ್ತಿನಲ್ಲಿ ತಮ್ಮ ಸ್ಥಾನವನ್ನು ಮತ್ತೆ ಪಡೆಯಲು ಸಾಧ್ಯವಿರುವುದಿಲ್ಲ. ಕಾರಣವೇನೆಂದರೆ ತೆರವಾಗಿದ್ದ ಇವರ ಸ್ಥಾನದಲ್ಲಿ 1958ರ ಚುನಾವಣೆ ಕಾಯ್ದೆ ಅನ್ವಯ ಹೊಸ ಸದಸ್ಯನನ್ನು ಆಯ್ಕೆ ಮಾಡಲಾಗಿರುತ್ತದೆ. ಆದ ಕಾರಣ ಸರಕಾರದಲ್ಲಿ ಸಚಿವ ಸ್ಥಾನವನ್ನು ಪಡೆಯಲು ಇಚ್ಛಿಸುವ ವ್ಯಕ್ತಿ ಸಂಸತ್ತಿನ ಸ್ಥಾನವನ್ನು ಬೆಲೆಯಾಗಿ ತೆರಬೇಕಾಗಿರುತ್ತದೆ ಎಂಬ ಭಯಇದ್ದೇ ಇರುತ್ತದೆ.

ಸಂವಿಧಾನ ವಿಧಿಗಳು ಸೋಲುವುದಿಲ್ಲ. ಆದರೆ ಜನತೆ ಅಥವ ಜನತೆಯ ಪ್ರತಿನಿಧಿಗಳು ಸಂವಿಧಾನವನ್ನು ಸೋಲವಂತೆ ಮಾಡುತ್ತಾರೆ ಎಂಬುದನ್ನು ರಾಷ್ಟ್ರಗಳ ಇತಿಹಾಸವನ್ನು ಅವಲೋಕಿಸಿದಾಗ ಹಲವಾರು ಸಂದರ್ಭಗಳು ಉದಾಹರಣೆಯಾಗಿ ದೊರೆಯುತ್ತವೆ. ನಮ್ಮ ಮತ್ತು ನಮ್ಮ ಪ್ರತಿನಿಧಿಗಳ ಮಟ್ಟಿಗೆ ಇದು ಸತ್ಯವಾಗಲಿಲ್ಲವೆ ಎಂಬುವುದನ್ನು ನೋಡಿದಾಗ ಆಶ್ಚರ್ಯವಾಗಿ ಕಾಣುತ್ತದೆ. ಪ್ರತಿಯೊಂದು ಸರಕಾರದ ಪದ್ಧತಿಯು ಸಂಸಧೀಯ ಅಥವ ಅಧ್ಯಕ್ಷೀಯ ಸರಕಾರದ ಪದ್ಧತಿಯಾಗಲೀ, ಪ್ರತಿಯೊಂದು ಪದ್ಧತಿಗೂ ಅದರದೇ ಆದ ಬಲವತ್ತರವಾದ ಮತ್ತು ದುರ್ಬಲವಾದ ವಿಷಯಗಳು ಇದ್ದೇ ಇರುತ್ತವೆ. ಪ್ರತಿಯೊಂದು ಪದ್ಧತಿಯು ಹೇಗೆ ಕಾರ್ಯವನ್ನು ನಿರ್ವಹಿಸುತ್ತದೆ ಎಂಬುದರ ಮೇಲೆ ಅವಲಂಭಿತವಾಗಿರುತ್ತದೆ. ಕೆಲ ಕೊರತೆಗಳು ಮತ್ತು ನ್ಯೂನತೆಗಳು ಯಾವುದೇ ಬಗೆಯ ಅನುಷ್ಠಾನವಿಲ್ಲದೆ ನಮ್ಮ ಭಾರತದ ಸಂಸದೀಯ ಸರಕಾರದ ವ್ಯವಸ್ಥೆಯ ನಿರ್ವಹಣೆಯಲ್ಲಿ ಗೋಚರವಾಗುತ್ತದೆ.

ಸಂಸದೀಯ ಸರಕಾರದ ವ್ಯವಸ್ಥೆ ಮತ್ತು ಅಧ್ಯಕ್ಷೀಯ ಸರಕಾರದ ವ್ಯವಸ್ಥೆ ಪ್ರಜಾಸತ್ತಾತ್ಮಕವಾಗಿರುವಂತೆ ರೂಪಿಸಲಾಗಿದೆ. ಈ ಎರಡು ಪದ್ಧತಿಗಳಲ್ಲಿ ಅಧಿಕಾರಕ್ಕೆ ಬರುವ ಸದಸ್ಯರುಗಳು ಪ್ರಜಾತಂತ್ರ ಮತ್ತು ಅದರ ಲಕ್ಷಣಗಳಿಗೆ ಅನುಗುಣವಾಗಿ ಪ್ರಮಾಣವಚನ ಸ್ವೀಕರಿಸುತ್ತಾರೆ. ಸಾರ್ವಜನಿಕ ಬೆಂಬಲ ಇರುವಾಗ ಆಗಲಿ, ಅಥವ ಅಧಿಕಾರದಲ್ಲಿವಾಗ ಆಗಲಿ ಇವರುಗಳು ಪ್ರಜಾತಂತ್ರ ಪದ್ಧತಿಗೆ ಬದ್ಧರಾಗಿರುತ್ತಾರೆಯೋ ಐಂಬುದು ಮುಖ್ಯವಲ್ಲ. ಸಾರ್ವಜನಿಕ ಬೆಂಬಲ ಕಳೆದುಕೊಂಡಾಗ ಮತ್ತು ತಮ್ಮ ಸ್ಥಾನಗಳನ್ನು ಕಳೆದುಕೊಳ್ಳುವ ಸಮಯದಲ್ಲಿ ಇವರಗಳು ಈ ಪ್ರಜಾತಂತ್ರ ಪದ್ಧತಿಗೂ ಅದರ ಲಕ್ಷಣಗಳಿಗೂ ಬದ್ಧರಾಗಿರುತ್ತಾರೆಯೆ ಎಂಬುವುದೇ ನಿಜವಾದ ಪರೀಕ್ಷೆ ಕಾಲ.

ಅಧ್ಯಕ್ಷೀಯ ಪದ್ಧತಿ ಸೀಸರತನಕ್ಕೂ ಮತ್ತು ಸರ್ವಾಧಿಕಾರಕ್ಕೂ ದಾರಿಮಾಡಿಕೊಡಿಕೊಡುವ ಪದ್ಧತಿಯ ವೈಶಿಷ್ಟ್ಯವನ್ನು ಆವು ಮರೆಯಬಾರದು. ಅಮೇರಿಕಾ ಮತ್ತು ಪಶ್ಚಿಮ ಯುರೋಪಿನ ರಾಷ್ಟ್ರಗಳ ಅನುಭವ ಯಾವಾಗಲೂ ಅಧಿಕಾರ ಮಾಧರಿಯೇ ಆಗಿರುತ್ತದೆಂದು ಹೇಳಲು ಸಾಧ್ಯವಿರುವುದಿಲ್ಲ. ಏಕೆಂದರೆ ಅವುಗಳ ಸಾಂಪ್ರದಾಯಿಕವು, ಸಾರ್ವ ಕಾಲಿಕ ಮೌಲ್ಯಗಳು ರಾಜಕೀಯ ವಾತಾವರಣಗಳು ಬಿನ್ನ ಬಿನ್ನವಾಗಿರುತ್ತವೆ. ಅಧ್ಯಕ್ಷೀಯ ಪದ್ಧತಿಯಲ್ಲಿ ಅಮೇರಿಕಾ ಫ್ರೆಂಚ್ ರಾಷ್ಟ್ರಗಳ ಅನುಭವವು ಏನೇ ಆಗಿರಲಿ, ಆದರೆ ಏಷ್ಯ ಮತ್ತು ಆಫಿಕಾ ರಾಷ್ಟ್ರಗಳಲ್ಲಿ ರಾಷ್ಟ್ರಪತಿಗಳಾದವರು ರಾಷ್ಟ್ರಪತಿ ಸ್ಥಾನಕ್ಕೆ ಬಂದ ಮೇಲೆ ಚುನಾವಣೆ ನಡೆಸಿ ಅಧಿಕಾರದಿಂದ ಹೊರ ಹೋಗಿದ್ದಾರೆಂದು ಹೇಳಲು ಆಗುವುದಿಲ್ಲ ರಾಷ್ಟ್ರಪತಿಗಳನ್ನು ಬದಲಾಯಿಸುಯಲ್ಲಿ ಸಹಜ ಸಾವು ಮತ್ತು ರಕ್ತ ಕ್ರಾಂತಿ ಮಾತ್ರ ಪ್ರಮುಖ ಪಾತ್ರವಹಿಸಿವೆ. ಇದಕ್ಕೆ ಪರ್ಯಾಯವಾಗಿ ಸಂಸಧೀಯ ಪದ್ಧತಿಯನ್ನು ನೋಡಬಹುದು. 1977 ರಲ್ಲಿ ನಡೆದ ಮಹಾ ಚುನಾವಣೆಯಿಂದಾಗಿ ಶ್ರೀಮತಿ ಇಂದಿರಾಗಾಂಧಿಯವರು ಅಧಿಕಾರದಿಂದ ಹೊರ ಹೋಗಬೇಕಾಯಿತು. ಮತ್ತು 1980 ರ ಚುನಾವಣೆಯಿಂದಾಗಿ ಮಾತ್ರ ಇವರು ಅದೇ ಅಧಿಕಾರವನ್ನು ಪಡೆಯಲು ಸಾಧ್ಯವಾಯಿತು. ಇದು ಸಂಸಧೀಯ್ಯ ಸರಕಾರದ ವ್ಯವಸ್ಥೆಯಲ್ಲಿ ಮಾತ್ರಸಾಧ್ಯ ಈ ರೀತಿಯ ಬದಲಾವಣೆಯನ್ನು ಏಷ್ಯ ಮತ್ತು ಆಫ್ರಿಕಾ ಖಂಡದಲ್ಲಿ ಅಧಕ್ಷೀಯ ಪದ್ಧತಿಯನ್ನು ಅಳವಡಿಸಿರುವ ರಾಷ್ಟ್ರಗಳಲ್ಲಿ ಮೇಲ್ಕಂಡ ಸಂಪ್ರದಾಯವನ್ನು ನಾವಿಂದು ನೋಡಲು ಸಾಧ್ಯವಿದೆಯೇ ?

ಸಂವಿಧಾನದ ಯಶಸ್ಸು ಅದನ್ನು ಸಮರ್ಥವಾಗಿ ರಚನೆ ಮಾಡುವುದರಿಂದ ಅಷ್ಟೆ ಅಲ್ಲ, ಅಥವ ಅದರಲ್ಲಿ ಬರುವ ವಿಧಿಗಳು ವೈಶಿಷ್ಟ್ಯ ಪೂರ್ಣವಾಗಿ ರಚಿಸಲ್ಪಟ್ಟಿದೆಯೇ ಇಲ್ಲವೇ ಎಂಬುವುದರಿಂದಲೂ ಅಲ್ಲ. ಸಂವಿಧಾನದಲ್ಲಿ ಬರುವ ವಿಧಿಗಳು ಯಾವರೀತಿ ಕಾರ್ಯ ನಿರ್ವಹಿಸಲು ಸಾಧ್ಯವಿವೆ ಎನ್ನುವುದನ್ನು ಪ್ರಥಕರಿಸುವುದರ ಮೇಲೆ ಸಂವಿಧಾನದ ಯಶಸ್ಸು ಅವಲಂಭಿಸಿವೆ ಎಂಬುದನ್ನು ಇಲ್ಲಿ ಸ್ಪಷ್ಟ ಪಡಿಸಬೇಕು,

ಮೊದಲ ಮಹಾಯುದ್ಧದ ನಂತರ ವೇಮರ್ ಸಂವಿಧಾನ ರಚಿಸಲ್ಪಟ್ಟಿತು. ಕೆಲವು ಸಂವಿಧಾನಗಳಲ್ಲಿ ವೇಮರ್ ಸಂವಿಧಾನ ನೀಡಿದ ಸ್ವಾತಂತ್ರ್ಯಕ್ಕಿಂತ ಹೆಚ್ಚು ಸ್ವಾತಂತ್ರ್ಯವನ್ನು ಮತ್ತು ಮೌಲ್ಯಗಳನ್ನು ಅಳವಡಿಸಿಕೊಂಡಿದ್ದು ಜನತೆ ಇವುಗಳನ್ನು ಸ್ವಾಗತಿಸಿದರಾದರು, ಈ ಸಂವಿಧಾನಗಳು ಸಮರ್ಪಕವಾಗಿ ಕಾರ್ಯ ನಿರ್ವಹಿಸದೇ ಇದ್ದ ಕಾರಣ ಜನತೆ ಎಲ್ಲಾ ಭರವಸೆಗಳನ್ನು ಕಳೆದುಕೊಂಡು ಈ ಸಂವಿಧಾನದ ಅಧಿಕಾರವನ್ನು ವಹಿಸಿಕೊಳ್ಳಲು ಆಹ್ವಾನಿಸಿದ್ದವರು ಇದರ ಎಲ್ಲಾ ಆದರ್ಶಗಳಿಗೆ ಸಮನಾಗಿ ನಡೆಯಲಿಲ್ಲ. ಇದರಿಂದಾಗಿ ತುರ್ತು ಪರಿಸ್ಥಿತಿಯು ಆರಂಭಿಸಿ ಅಧಿಕಾರಕ್ಕೆ ಹಿಟ್ಲರ್‌ನಂಥವರು ಬಂದರು. ಮತ್ತು ಅಲ್ಲಿಂದಾಚಿನ ವಿದ್ಯಮಾನಗಳು ನಮ್ಮೆಲ್ಲರಿಗು ತಿಳಿದಿರುವಂಥದೇ ಆಗಿರುತ್ತದೆ.

ಸಂವಿಧಾನದಲ್ಲಿ ಹಲವಾರು ವಿಧಿಗಳನ್ನು ರಚಿಸಲು ಯಾವ ಆದರ್ಶಗಳು ಸ್ಪೂರ್ತಿದಾಯಕವಾಗಿದ್ದವೋ ಆ ಆದರ್ಶಗಳಿಗೆ, ಮೌಲ್ಯಗಳಿಗೆ ನಮ್ಮ ಮುಂದಿನ ಪೀಳಿಗೆಯವರು ಬದ್ಧರಾಗಿರಬೇಕೆಂಬುವುದು ನಮ್ಮ ಸಂವಿಧಾನದಿಂದ ನಾವು ಅರ್ಥೈಸಿಕೊಳ್ಳಬಹುದು. ಈ ಬಗೆಯ ಆದರ್ಶ ಎಲ್ಲಾ ಸಂವಿಧಾನಗಳಲ್ಲೂ ಕಾಣಬಹುದು. ಸಂವಿಧಾನದಲ್ಲಿ ನಿರೂಪಿಸಲ್ಪಟ್ಟಿರುವ ಈ ಮೂಲ ಲಕ್ಷಣಗಳು ಒಮ್ಮೆ ಇಲ್ಲದೆ ಹೋದರೆ, ಕಾರ್ಯ ನಿರ್ವಹಿಸುವಲ್ಲಿ ಸಂವಿಧಾನ ವಿಧಿಗಳು ಸ್ಥಗಿತಗೊಳ್ಳುವವು.

ಬೃಹತ್ ರಾಷ್ಟ್ರಗಳ ಆಡಳಿತ ವ್ಯವಹಾರದಲ್ಲಿ ಬೌದ್ಧಿಕ ಸಣ್ಣತನವು ಅನಾರೋಗ್ಯಕರ ಮತ್ತು ರಾಷ್ಟ್ರೀಯ ಸಂಸ್ಥೆಗಳು ನೈತಿಕತೆಯ ಮಟ್ಟ ಮುಟ್ಟಲು ಧೀರ್ಘ ಕಾಲವನ್ನು ತೆಗೆದುಕೊಳ್ಳುತ್ತವೆ. ಈ ಆದರ್ಶಗಳು ಮತ್ತು ಮೌಲ್ಯಗಳ ಹಿಂದೆ ಬೆವರಿನಂತೆ, ರಕ್ತ, ಕಣ್ಣೀರು, ಮತ್ತು ಹೇಳಲಾರದಷ್ಟು ತ್ಯಾಗ ಬಲಿದಾನಗಳಿವೆ. ಮೌಲ್ಯಗಳ ನಿರಾಕರಣೆಯಿಂದಾಗಲಿ ಅಥವ ಸ್ವಾರ್ಥದಿಂದಾಗಲಿ, ಅಥವ ಸಣ್ಣತನದ ಆಲೋಚನೆಯಿಂದಾಗಲಿ ಕೇವಲ ಒಂದು ರಾತ್ರಿಯಲ್ಲಿ ಇವೆಲ್ಲವು ಛಿದ್ರ ಛಿದ್ರವಾಗಿ ಬಿಡಬಹುದು ಸ್ವಾತಂತ್ರ್ಯದ ಬೆಲೆ ಎಂದರೆ ನಿರಂತರ ಎಚ್ಚರಿಕೆ ವಹಿಸುವುದು ಮತ್ತು ಅಂತಿಮವಾಗಿ ಇದನ್ನು ಉಳಿಸಿಕೊಳ್ಳುವವರೆಂದರೆ ಜನತೆಯೆ. ಜನತೆಯ ಅಜ್ಞಾನ ಅಧಿಕಾರಿಗಳ ಅಧಿಕಾರದಾಹವನ್ನು ಸ್ವಾಗತಿಸಿದಂತೆಯೇ ಎಂಬುದನ್ನು ನಮಗೆ ಇತಿಹಾಸದ ಪಾಠಗಳು ಹೇಳುತ್ತವೆ.

ಹಳೆಯ ಫೈಲು ಹೊರಗೆಡಹಿದ ರಹಸ್ಯ

ದ್ವಿತೀಯ ಜಾಗತಿಕ ಸಮರಕಾಲದಲ್ಲಿ ಲಷ್ಕರೀವಾದಿ ಜಪಾನ್ ಚೀನಾದಲ್ಲಿ ತಾನು ಆಕ್ರಮಿಸಿಕೊಂಡಿದ್ದ ಜಿಲ್ಲೆಗಳಲ್ಲಿ ಬರ್ಬರ ಸ್ವರೂಪದ ರಾಸಾಯನಿಕ ಆಯುಧಗಳನ್ನು ಹಾಗೂ ರೋಗಕಾರಕ ಸೂಕ್ಷ್ಮಾಣು ಜೀವಿಗಳನ್ನು ಹರಡುವ ಆಯುಧಗಳನ್ನು ಬಳಸಿತ್ತೆಂಬುದಕ್ಕೆ ಖಚಿತ ಪುರಾವೆಗಳು ಇದೀಗ ದೊರಕಿವೆ. ಟೋಕಿಯೋದ ಹಳೆ ಪುಸ್ತಕಗಳ ಮಾರಾಟದ ಅಂಗಡಿಯಲ್ಲಿ ದೊರಕಿರುವ ಹಳೆಯ ಎರಡು ಫೈಲುಗಳಲ್ಲಿ ನಿರೂಪಿತವಾಗಿರುವ ವಿವರಗಳು ಜಪಾನಿನ ರಕ್ತದಾಹದ ಕ್ರೂರ ಮುಖವೊಂದನ್ನು ಬಯಲಿಗೆಳೆದಿವೆ.

ಜಪಾನಿನ ಸೇನೆಯ 713 ನೇ ಘಟಕವು ವ್ಯಾಪಕವಾಗಿ ಜನರನ್ನು ನಿರ್ನಾಮಗೊಳಿಸಬಲ್ಲ ಅಮಾನುಷ ಆಯುಧಗಳ ಉತ್ಪಾದನೆ ಮತ್ತು ಅಭಿವೃದ್ಧಿ ಕಾರ್ಯದಲ್ಲಿ ನಿರತವಾಗಿತ್ತು. ಈ ಸೇನಾ ಘಟಕದ ವೈದ್ಯಕೀಯ ಸೇವಾವಿಭಾಗದ ಲೆಫ್ಟಿನೆಂಟ್ ಜನರಲ್ ಕಿರೋ ಇಶಿ ಎಂಬಾತ ಅಮಾನುಷ ಆಯುಧಗಳ ಸಾಮರ್ಥ್ಯ ಪರೀಕ್ಷಿಸಲು ಮಾನವರನ್ನು ಬಲಿಪಶುಗಳಾಗಿ ಬಳಸುತ್ತಿದ್ದ. ಮುಖ್ಯವಾಗಿ ಚೀಣೀ, ರಷ್ಯನ್, ಹಾಗೂ ಇತರ ಜನಾಂಗಗಳಿಗೆ ಸೇರಿದ ವ್ಯಕ್ತಿಗಳನ್ನು ಆತ ಪ್ರಯೋಗ ಪಶುಗಳಾಗಿ ಬಳಸುತ್ತಿದ್ದ. ಅತ್ಯಧಿಕ ಪ್ರಮಾಣದಲ್ಲಿ ರಾಸಾಯನಿಕ ವಿಷ ವಸ್ತುಗಳನ್ನು ಬೆರೆಸಿದ ಸಮ್ಮಿಶ್ರಣಗಳನ್ನು ಅವರಿಗೆ ಬಲಾತ್ಕಾರವಾಗಿ ಕುಡಿಸುತ್ತಿದ್ದರು. ಮಂಚೂರಿಯಾದಲ್ಲಿ ಇಶಿ ಅವರ ಸೇನಾಘಟಕದ ನೇತೃತ್ವದಲ್ಲಿದ್ದ ಪ್ರಯೋಗಾಲಯಗಳಲ್ಲಿ ರೋಗಕಾರಕ ಸೂಕ್ಷ್ಮಾಣು ಜೀವಿಗಳನ್ನು ಹರಡಬಲ್ಲ ಬಾಂಬುಗಳ ತಯಾರಿಕೆಗೆ ಅವಶ್ಯಕವಾದ ಹೂರಣವನ್ನು ತುಂಬಲಾಗುತ್ತಿತ್ತು. ಈ ಬಾಂಬುಗಳ ನೆರವಿನಿಂದ ಜಪಾನಿನ ಮಿಲಿಟರಿ ಪೆಸಿಫಿಕ್‌ನಲ್ಲಿ ಸಮರದ ಸ್ವರೂಪಕ್ಕೆ ಹೊಸ ತಿರುವು ನೀಡಲು ಉದ್ದೇಶಿಸಿತ್ತು.

"ಉನ್ನತ ರಹಸ್ಯ" ಎಂಬ ಶೀರ್ಷಿಕೆಯಿರುವ ಈ ಫೈಲುಗಳಲ್ಲಿ ಮೇಲಿನ ವಿವರಗಳಿವೆ. ಇತ್ತೀಚೆಗೆ ಜಪಾನಿನ "ಮೈನಿಚಿ" ಪತ್ರಿಕೆ ಹಳೆ ಫೈಲುಗಳ ವೃತ್ತಾಂತವನ್ನು ವರದಿ ಮಾಡಿತು.

ಜಪಾನಿನ ಸೇನೆಯಲ್ಲಿದ್ದ ಕೆಲ ಕಸಾಯಿಗಳು ತಮ್ಮ ಪೈಶಾಚಿಕ ಹಂಚಿಕೆಗಳ ಮೂಲಕ ನೂರಾರು ಸಾವಿರಾರು ಮಾನವ ಜೀವಗಳನ್ನು ಬಲಿತೆಗೆದುಕೊಂಡರು. ಆದರೆ ಮಂಚೂರಿಯಾಕ್ಕೆ ಸೋವಿಯೆಟ್ ಪಡೆಗಳ ಕ್ಷಿಪ್ರ ಆಗಮನದಿಂದ ಅವರ ಮುಂದಣ ಪಾತಕ ಹಂಚಿಕೆಗಳು ವಿಫಲವಾದುವು. ಬಹಳಷ್ಟು ಮಾನವ ಜೀವಿಗಳು ಬದುಕಿ ಉಳಿದುವು 1945 ರ ಅಗಸ್ಟ್‌ನಲ್ಲಿ ಜಪಾನಿನ ಬಲಿಷ್ಠ ಕ್ವಾಂಗ್‌ಟುಂಗ್‌ಸೇನೆ ಸೋವಿಯೆಟ್ ಪಡೆಗಳ ಹೊಡೆತ ತಾಳಲಾರದೆ ಸೋತು ನೆಲಕಚ್ಚಿತು. ಜಪಾನನ್ನು ಆಕ್ರಮಿಸಿಕೊಂಡ ಅಮೆರಿಕದ ಸೇನೆಯ ರಕ್ಷಣೆ ದೊರೆತ ಕಾರಣ ಇಶಿ ಮತ್ತು ಆವನ ಬೆಂಬಲಿಗರು ಘೋರ ಪ್ರತೀಕಾರ ಎದುರಿಸುವ ದಾರುಣ ಪರಿಸ್ಥಿತಿಯಿಂದ ಪಾರಾದರು.

[ಕೃಪೆ: ಸೋವಿಯತ್ ಲೇಖನ ಮಾಲೆ

ಇತಿಹಾಸದ ರೋಮಾಂಚಕಾರೀ ಸಾಹಸ ಯಾನ

ಚೀನಾದ 'ಲಾಂಗ್ ಮಾರ್ಚ್'ಗೆ 50 ವರುಷಗಳು

ಅಕ್ಟೋಬರ್ 26, 1934 ಮಾನವ ಕುಲದ ಕ್ರಾಂತಿಯ ಚರಿತ್ರೆಯಲ್ಲಿ ಸದಾ ಸ್ಮರಣೀಯವೆನಿಸುವ ಆ ಮಹಾನ್ ಘಟನೆಯ ಆರಂಭದ ದಿನ. ಚೀನಾದ ಹನ್ನೊಂದು ಪ್ರಾಂತ್ಯಗಳನ್ನು ಆವರಿಸಿಕೊಂಡು, 12,500 ಕಿಲೋಮೀಟರ್ ದೂರದ ದೀರ್ಘ ಯಾತ್ರೆಯನ್ನು 85,000 ಮಂದಿ ಕೆಂಪು ಸೈನಿಕರು ಕಮ್ಯುನಿಸ್ಟ್ ಪಾರ್ಟಿ ಮತ್ತು ಚೇರ್ಮನ್ ಮಾವೋತ್ಸೆತುಂಗರ ನಾಯಕತ್ವದಲ್ಲಿ ಅಂದು ಆರಂಭಿಸಿದರು.

ಜಮೀನುದಾರರ, ಸಿರಿವಂತರ, ಸರ್ಕಾರೀ ಅಧಿಕಾರಿಗಳ ಪಾಳೆಯಗಾರರ ನಿರ್ದಾಕ್ಷಿಣ್ಯ ಸುಲಿಗೆಗೆ ಒಳಗಾಗಿ, ದಬ್ಬಾಳಿಕೆಯ, ದಾರಿದ್ರ್ಯದ ಜ್ವಾಲೆಯಲ್ಲಿ ದಹಿಸಿ ಹೋಗುತ್ತಿದ್ದ ಚೀನಾದ ಕೋಟಿ ಕೋಟಿ ಜನತೆಗೆ ಹೊಸ ಬದುಕಿನ ಭರವಸೆಯಾಗಿ ಕಾಣಿಸಿಕೊಂಡ ಕೆಂಪು ಸೈನ್ಯ ಚೀನಾದ ಜನತೆಯಲ್ಲಿ ಹೊಸ ರಕ್ತವನ್ನು ಪ್ರವಹಿಸಿತು. ಅವರಿಗೆ ಹೊಸ ದಿಕ್ಕಿನ ದರ್ಶನ ಮಾಡಿಸಿತು.

ದೀರ್ಘ ಯಾತ್ರೆಯ ಮಾರ್ಗದುದ್ದಕ್ಕೂ ಚಿಯಾಂಗ್-ಕೈ–ಷೇಕ್‌ನ ಬೃಹತ್ ಸಂಖ್ಯೆಯ ಸುಸಜ್ಜಿತ ಸೈನಿಕರಿಗೆದುರಾಗಿ ಹೋರಾಡುತ್ತಾ, ದಟ್ಟ ಕಾನನದ ನಡುವೆ ಸುರಿವ ಮಳೆಯಲ್ಲಿ ನೆನೆಯುತ್ತಾ, ರಕ್ತ ಹೆಪ್ಪುಗಟ್ಟಿಸುವ ಚಳಿಯ ಕೊರೆತವನ್ನು ಸಹಿಸುತ್ತಾ, ಕೆಸರಿನಲ್ಲಿ ಹೂತು ಹೋದ ಕಾಲುಗಳನ್ನು ಕಿತ್ತು ಮುಂದಡಿಯಿರಿಸುತ್ತಾ, ಎತ್ತರದ ಮಂಜು ಸುರಿವ ಬೆಟ್ಟಗಳನ್ನೇರುತ್ತಾ, ದುರ್ಗಮ ಕಣಿವೆ–ಕಂದಕಗಳನ್ನು ದಾಟುತ್ತಾ, ಭೋರ್ಗರೆವ ನದಿಗಳಲ್ಲಿ ಈಜಿ ಆಚೆ ದಡ ಸೇರುತ್ತಾ, ಮುನ್ನಡೆದ ದೀರ್ಘ ಪಯಣದ ಕೆಂಪು ಸೈನ್ಯದ ವೀರರು ಎಲ್ಲಕ್ಕಿಂತ ಹೆಚ್ಚಾಗಿ ಎದುರಿಸಬೇಕಾಗಿ ಬಂದದ್ದು ಹಸಿವನ್ನು. ಇಷ್ಟಿಷ್ಟು ಮಾತ್ರಕ್ಕೂ ಹಸಿವನ್ನು ತಡೆಯಲಾರೆವೆಂಬ ಘಟ್ಟ ತಲುಪಿದಾಗ ಕೆಂಪು ಸೇನೆಯ ಕೆಲವು ಸಂಗಾತಿಗಳು ತಮ್ಮ ಕಾಲುಗಳಲ್ಲಿದ್ದ ಚರ್ಮದ ಪಾದರಕ್ಷೆ, ಬೂಟ್ಸುಗಳನ್ನೇ ಬೆಂಕಿಯಲ್ಲಿ ಸುಟ್ಟು ತಿಂದಿದ್ದಾರೆ ಎಂಬ ಸಂಗತಿ ಆ ಪರಿಸ್ಥಿತಿಯ ಕರಾಳ ಮುಖವನ್ನು ಪರಿಚಯಿಸುತ್ತದೆ.

ಧೀರ್ಘ ಯಾತ್ರೆಯ ಕಠಿಣ ಪರಿಸ್ಥಿತಿಯಲ್ಲಿ ಹಸಿವಿನಿಂದ, ಚಳಿಯಿಂದ, ಶತ್ರು ಸೈನಿಕರ ಆಕ್ರಮಣದಿಂದ ಮಾರ್ಗ ಮಧ್ಯದಲ್ಲೇ ಸತ್ತವರು ಸಾವಿರಗಟ್ಟಲೆ ಸಂಗಾತಿಗಳು. ಸತ್ತ ಸಂಗಾತಿಗಳ ನೆನೆಯುತ್ತಾ, ಅವರಿಗಾಗಿ ಒಂದೆರಡು ಹನಿ ಕಣ್ಣೀರು ಸುರಿಸಿ ಮುಂದೆ ನಡೆಯುವುದನ್ನುಳಿದು ಬೇರೇನೂ ಮಾಡಲಾಗದ ಪರಿಸ್ಥಿತಿಯಲ್ಲಿದ್ದ ಉಳಿದ ಸಂಗಾತಿಗಳ ಸ್ಥಿತಿಯನ್ನು ಯಾರೊಬ್ಬರೂ ಊಹಿಸಬಹುದಾಗಿದೆ. ಇದಕ್ಕಿಂತ ಹೆಚ್ಚು ಕರುಳು ಆಂಡುವ ಕಥೆಗಳೆಂದರೆ ಈಗಲೋ ಆಗಲೋ ಕೊನೆಯುಸಿರೆಳೆದು ಬಿಡುವ ತಮ್ಮ ಸಂಗಾತಿಗಳನ್ನು ಅಲ್ಲೇ ಬಿಟ್ಟು ಮುಂದೆ ಮುಂದೆ ನಡೆಯಬೇಕಾದ ಅನಿವಾರ್ಯತೆಗೆ ಒಳಗಾಗುವ ಸನ್ನಿವೇಶಗಳು. ಇನ್ನೂ ಬದುಕಿದ್ದ ಸಂಗಾತಿಯೊಬ್ಬನನ್ನು ಬಿಟ್ಟು ಮುಂದೆ ಹೋಗಲೇ ಬೇಕಾಗಿದ್ದ ಸೈನಿಕರ ಮನೋಸ್ಥಿತಿ ಮತ್ತು ತನ್ನಿಚ್ಛೆಯಿಂದಲೇ ಹಿಂದೆ ಉಳಿದು ಸಾವನ್ನು ನಿರೀಕ್ಷಿಸುತ್ತಾ ಚಡಪಡಿಸುವ ಸಂಗಾತಿಯ ಮನೋಸ್ಥಿತಿ ಹೃದಯವಿದ್ದ ಯಾರಿಗಾದರೂ ಊಹಿಸಿಕೊಳ್ಳಬಹುದಾದಂತಹುದು. ಆದರೆ ಪ್ರತಿಯೊಬ್ಬ ಸೈನಿಕನೂ ತನ್ನ ಪ್ರಾಣಕ್ಕಿಂತ ಜನತೆಯ ಹಿತವೇ ಮುಖ್ಯವೆಂಬುದನ್ನು ಚೆನ್ನಾಗಿ ಗ್ರಹಿಸಿಕೊಂಡಿದ್ದ ಎಂಬುದನ್ನು ನಾವು ಮರೆಯಬಾರದು.

ಕೆಂಪು ದಳದ ಸೈನಿಕರು ಮಾನವಮಾತ್ರರಿಂದ ಎದುರಿಸಲಸಾಧ್ಯವಾದಂತಹ ಅಡೆ ತಡೆಗಳನ್ನು, ಮೀರಿ, ಭೀಕರ ಕಷ್ಟ ಕಾರ್ಪಣ್ಯಗಳನ್ನು ಸಹಿಸಿ ತಮ್ಮ ದೃಢತೆಯನ್ನು ಉಳಿಸಿಕೊಂಡು ಮುನ್ನಡೆದದ್ದಾದರೂ ಹೇಗೆ?

ಗಾಯಗೊಂಡ, ಖಾಹಿಲೆಗೊಳಗಾದ ಸೈನಿಕರಿಗೆ ಧೈರ್ಯ ತುಂಬುತ್ತಾ "ಕಷ್ಟಗಳ ಪರಂಪರೆಯೇ ಬಂದರೂ ಸಹ ನಾವು ಕುಗ್ಗಬಾರದು, ಕಷ್ಟವನ್ನು ಕಂಡು ಹೆದರಿದರೆ ಅವು ಮತ್ತೂ ಭಯಂಕರವಾಗಿ ತೋರುತ್ತವೆ, ನೀನು ಹೆದರದೆ ಅವುಗಳನ್ನು ಎದುರಿಸಿದರೆ ಅವು ನಿನ್ನನ್ನೇನೂ ಮಾಡಲಾರವು" ಮುಂತಾಗಿ ಹೇಳಿ ನವೋತ್ಸಾಹವನ್ನು ತುಂಬಿಸುತ್ತಿದ್ದ ಚೇರ್ಮನ್ ಮಾವೋತ್ಸೆತುಂಗ್ ರವರ ಮಹಾನ್ ವ್ಯಕ್ತಿತ್ವ ಮತ್ತು ಸಂಘಟನಾ ಕುಶಲತೆ ಅಲ್ಲದೆ ಕೆಂಪು ಸೈನ್ಯದ ಸಂಗಾತಿಗಳೊಂದಿಗೆ ಅವರ ಮಾನವೀಯ ವರ್ತನೆ ಧೀರ್ಘ ಪಯಣದ ಯಶಸ್ಸಿನ ಗುಟ್ಟುಗಳಲ್ಲೊಂದು.

ಮಾರ್ಗದುದ್ದಕ್ಕೂ ಅಪಾರ ಸಹಕಾರ, ಪ್ರೀತಿ, ಬಂಧುತ್ವಗಳನ್ನು ತೋರಿಸುತ್ತಿದ್ದ ಚೀನಾದ ವಿಶಾಲ ಜನಸಮೂಹ ಮತ್ತೊಂದು ಕಾರಣ

ಎಲ್ಲಕ್ಕಿಂತ ಹೆಚ್ಚಾಗಿ ಪ್ರತಿಯೊಬ್ಬ ಕೆಂಪು ಸೇನೆಯ ಸದಸ್ಯನಲ್ಲೂ ಅಂತರ್ಗತವಾಗಿದ್ದ ಆತ್ಮ ವಿಶ್ವಾಸ, ಅಸಾಧಾರಣ ಧೈರ್ಯ, ಮಾರ್ಕ್ಸ್‌ವಾದೀ-ಲೆನಿನ್‌ವಾದೀ ಸಿದ್ಧಾಂತವೊಂದೇ ಸಂಕಷ್ಟಗಳ ವಿಮೋಚನೆಗೆ ಉಳಿದಿರುವ ಏಕೈಕ ಮಾರ್ಗ ಎಂಬ ದೃಢ ನಂಬಿಕೆಗಳೇ ಧೀರ್ಘ ಯಾನದ ಮಹಾನ್ ವಿಜಯಕ್ಕೆ ಪ್ರೇರಕ ಅಂಶಗಳಾದವು.

ಈ ದೀರ್ಘ ಯಾತ್ರೆಯ ಪ್ರಾಮುಖ್ಯತೆಯ ಬಗ್ಗೆ ಚೇರ್ಮನ್ ಮಾವೋರವರು ಹೀಗೆ ಹೇಳಿದ್ದಾರೆ —

"ಲಾಂಗ್ ಮಾರ್ಚ್ ಕುರಿತು ಮಾತನಾಡುತ್ತಾ ಅದರ ಪ್ರಾಮುಖ್ಯತೆ ಏನು ಎಂದು ಯಾರಾದರೂ ಕೇಳಬಹುದು ಇಂಥದು ಮಾತ್ರ ಇತಿಹಾಸದಲ್ಲಿ ಮೊದಲ ಬಾರಿಗೆ ನಡೆಯಿತೆಂಬುದು ನಮ್ಮ ಉತ್ತರ, ಸಾಮ್ರಾಜ್ಯಶಾಹಿಗಳು ಅವರ ಶುನಕಗಳಾದ ಚಿಯಾಂಗ್-ಕೈ–ಷೇಕ್ ಪ್ರಭೃತಿಗಳು ನಿರ್ವೀರ್ಯರೆಂದೂ ಕೆಂಪು ಸೈನ್ಯ ವೀರಾಗ್ರೇಸರರ ಸೈನ್ಯವೆಂದೂ "ಲಾಂಗ್ ಮಾರ್ಚ್" ಪ್ರಪಂಚಕ್ಕೇ ಪ್ರಕಟಪಡಿಸಿತು. ಆ ಗುಂಪು ನಮ್ಮನ್ನು ಸುತ್ತಮುತ್ತಲೂ ಹಿಂಬಾಲಿಸಿ, ಹಿಂಸಿಸಲು ಆತಂಕ ಪಡಿಸಲು, ಅಡ್ಡಿ ಮಾಡಲು ಪ್ರಯತ್ನಿಸಿ ಸಂಪೂರ್ಣ ನಿಫಲವಾಯ್ತೆಂದು ಅದು ಸಾರಿತು, "ಲಾಂಗ್ ಮಾರ್ಚ್" ಒಂದು ಪ್ರಚಾರ ಶಕ್ತಿಯೂ ಕೂಡ. ಹನ್ನೊಂದು ಪ್ರಾಂತ್ಯದಲ್ಲಿನ 20 ಕೋಟಿ ಪ್ರಜೆಗಳಿಗೆ ಕೆಂಪು ಸೇನೆಯ ಮಾರ್ಗವೇ ಮುಕ್ತ ಮಾರ್ಗವೆಂದು ನಿರೂಪಿಸಿತು. ಲಾಂಗ್ ಮಾರ್ಚ್ ಇಲ್ಲದಿದ್ದರೆ ಕೆಂಪು ಸೈನ್ಯ ಪ್ರತಿನಿಧಿಸುವ ಘನತೆಯನ್ನು, ಸತ್ಯತೆಯನ್ನು ವಿಶಾಲ ಪ್ರಜಾ ಬಾಹುಳ್ಯ ಹೇಗೆ ಅರಿಯುತ್ತಿತ್ತು? ಲಾಂಗ್ ಮಾರ್ಚ್ ಹನ್ನೊಂದು ಪ್ರಾಂತ್ಯಗಳಲ್ಲಿ ಬಹು ಬಗೆಯ ಅಂಕುರಾರ್ಪಣ ಮಾಡಿದೆ, ಅವು ಮೊಳೆತು, ಎಲೆ ಬಿಟ್ಟು, ಮೊಗ್ಗು ಕಚ್ಚಿ, ಹೂವರಳಿ, ಫಲಿಸಿ ಭವಿಷ್ಯದಲ್ಲಿ ಬಂಗಾರದ ಬೆಳೆ ಬರಿಸುತ್ತಿವೆ...."

ಪ್ರತಿಯೊಬ್ಬ ಕಮ್ಯುನಿಸ್ಟನಲ್ಲೂ ದೃಢತೆ, ಕಷ್ಟ ಸಹಿಷ್ಣುತೆ, ತ್ಯಾಗ ಬಲಿದಾನಗಳ ಮಹಾನ್ ಗುಣಗಳನ್ನು ಭದ್ರವಾಗಿ ನೆಲೆಗೊಳಿಸುವಂತಹ ಕ್ರಾಂತಿಕಾರೀ ಘಟನೆಗಳಲ್ಲಿ ಅತ್ಯಂತ ರೋಮಾಂಚಕರವಾದ ಘಟನೆ 1934 ರ ಅಕ್ಟೋಬರ್‌ನಿಂದ 1936 ರ ಅಕ್ಟೋಬರ್‌ನ ವರೆಗೆ ಪೂರ್ಣ ಎರಡು ವರುಷಗಳ ಕಾಲ ನಡೆದ ಚೀನಾದ "ಲಾಂಗ್ ಮಾರ್ಚ್" ಎಂದರೆ ಉತ್ಪ್ರೇಕ್ಷೆಯಲ್ಲ.

'ಉದಯ'

ಪೂರ್ವ ಜರ್ಮನಿಯ ಪ್ರಗತಿ

ಬೂದಿಯಿಂದ ಎದ್ದು ಬಂದ ಮಹಾಶಕ್ತಿ

ಎರಡನೇ ಮಹಾಯುದ್ಧದಲ್ಲಿ ಬಾಂಬ್‌ದಾಳಿಯಿಂದ ಸಂಪೂರ್ಣ ನಾಶ ಹೊಂದಿದ್ದ ಪೂರ್ವ ಜರ್ಮನಿ ಈ ಹೊತ್ತು ಬೃಹದಾಕಾರವಾಗಿ ಬೆಳೆದು ನಿಂತಿದೆ. 1949, ಅಕ್ಟೋಬರ್ 7 ರಂದು ಜರ್ಮನ್ ಪ್ರಜಾಪ್ರಭುತ್ವ ಗಣರಾಜ್ಯ ಸ್ಥಾಪನೆಯಾಗಿತ್ತು. ಕಳೆದ 35 ವರ್ಷಗಳಲ್ಲಿ ಕಮ್ಯುನಿಸ್ಟ್ ಪಾರ್ಟಿಯ ಮಾರ್ಗದರ್ಶನದಲ್ಲಿ ಅಭಿವೃದ್ಧಿ ಸಾಧಿಸಿರುವ ಪೂರ್ವ ಜರ್ಮನಿ ಇಂದು ಜಗತ್ತಿನ ಔದ್ಯೋಗೀಕೃತ ರಾಷ್ಟ್ರಗಳಲ್ಲಿ ಹತ್ತನೆಯ ಸ್ಥಾನದಲ್ಲಿದೆಯೆಂಬುದು ಹೆಮ್ಮೆಯ ಸಂಗತಿ.

ಜರ್ಮನ್ ಪ್ರಜಾಪ್ರಭುತ್ವ ಗಣತಂತ್ರದ ಸ್ಥಾಪನೆಯಿಂದ ನಾವು ಜರ್ಮನ್ ಜನತೆಯ ಚರಿತ್ರೆಯಲ್ಲಿ ಮಹತ್ವದ ಪಾಠ ಕಲಿಯಬೇಕಾಗಿದೆ. ಯಾಕಂದರೆ ಈ ಹೊಸ ರಾಜ್ಯದ ಸ್ಥಾಪನೆಯಿಂದ, ಎರಡು ಮಹಾಯುದ್ಧಗಳಿಗೆ ಕಾರಣೀಭೂತವಾದ ಜರ್ಮನಿಯ ಜನತೆ ಮತ್ತು ಭೂಮಿ ಹೊಸ ಅನುಭವವನ್ನುಣ್ಣುವಂತಾಗಿದೆ. ಕಾರ್ಮಿಕರು, ರೈತರು ಮತ್ತು ಇತರ ದುಡಿಯುವ ಜನತೆ ಪೂರ್ವ ಜರ್ಮನಿಯಲ್ಲಿ ಅಧಿಕಾರ ನಡೆಸುತ್ತಿದ್ದಾರೆ. ಜರ್ಮನಿಯ ಇಡೀ ಚರಿತ್ರೆಯಲ್ಲಿಯೇ ಮೊದಲನೇ ಸಲ ಕಾರ್ಮಿಕ–ರೈತರ ರಾಷ್ಟ್ರ ಸ್ಥಾಪನೆಯಾಗಿ ಸಮತಾವಾದವನ್ನು ರಚಿಸುವತ್ತ ಮುಂದೆ ಸಾಗಿದೆ. ಎಲ್ಲಾ ರಂಗದಲ್ಲಿ ಪ್ರಗತಿ ಸಾಧಿಸಿ ಮುಂದೆ ಸಾಗಲು ಜಿಡಿಆರ್ ಸರಕಾರಕ್ಕೆ ಹೇಗೆ ಸಾಧ್ಯವಾಯಿತು. ಸಮತಾವಾದದ ಸ್ವಭಾವ ಸಿದ್ಧವಾದ ಗುಣಗಳಿಂದ ಇದನ್ನು ಸಾಧಿಸಲು ಶಕ್ಯವಾಯಿತು. 1946 ರಲ್ಲಿಯೇ ಪ್ರಮುಖ ಮೂಲಭೂತ ಕೈಗಾರಿಕೆಗಳನ್ನು ರಾಷ್ಟ್ರೀಕರಿಸಲಾಯಿತು. ಹಂತ ಹಂತವಾಗಿ ಅದನ್ನು ವಿಸ್ತರಿಸಲಾಯಿತು. 1950 ರಲ್ಲಿ ರೈತರು ಒಕ್ಕಲತನ ಉತ್ಪಾದನಾ ಸಹಕಾರಿ ಸಂಘಗಳನ್ನು ರಚಿಸಿದರು. ಅದರಿಂದ ರೈತರೇ ಭೂಮಿಯ ಹಾಗೂ ಬೆಳೆಗಳ ಮಾಲಕರಾದರು. ಈ ಎರಡು ಕಾರಣಗಳಿಂದಾಗಿ ಸಮತಾವಾದಿ ಆರ್ಥಿಕ ತಳಹದಿಯಲ್ಲಿ ಪೂರ್ವ ಜರ್ಮನಿಯನ್ನು ಕಟ್ಟಲು ಸಾಧ್ಯವಾಯಿತು.

ಗುತ್ತೇದಾರಿ ಪದ್ಧತಿ ನಾಶವಾಗಿ, ಕಾರ್ಖಾನೆಗಳಲ್ಲಿಯ ಲಾಭ ಜನರ ಸಲುವಾಗಿ ವ್ಯಯಮಾಡಲು ಜನರ ಸೊತ್ತಾಗಿಯೇ ಉಳಿದುದರಿಂದ ಯೋಜನಾಬದ್ಧವಾಗಿ ಸಾಮಾಜಿಕ ಕಾರ್ಯಕ್ರಮಗಳನ್ನು ರೂಪಿಸಲು, ನಿರ್ಮಿಸಲು ಸಾಧ್ಯವಾಯಿತು. ಜನರು ಕಷ್ಟಪಟ್ಟು ದುಡಿದಿದ್ದಾರೆ. ತಮ್ಮ ಜೀವನವನ್ನು ಸುಧಾರಿಸಿಕೊಂಡಿದ್ದಾರೆ.

ಪೂರ್ವ ಜರ್ಮನಿಯಲ್ಲಿ ನಿರುದ್ಯೋಗವೆಂಬುದೇ ಇಲ್ಲ 1949 ರಿಂದಲೇ ಎಲ್ಲರಿಗೂ ಪೂರ್ಣ ನೌಕರಿ ಸಿಕ್ಕಿದೆ. ನಿಜವಾದ ಆದಾಯ ಹೆಚ್ಚಾಗಿದ. ಕಳೆದ 20 ವರ್ಷಗಳಿಂದ ಅತ್ಯಾವಶ್ಯಕ ವಸ್ತುಗಳ ಬೆಲೆಯಾಗಲೀ, ಪ್ರಯಾಣ ದರಗಳಾಗಲೀ ಹೆಚ್ಚಾಗಿಲ್ಲ. ಉತ್ತಮವಾದ ಶಿಕ್ಷಣ, ಆರೋಗ್ಯ, ವಸತಿಗಳನ್ನೇರ್ಪಡಿಸಿರುವುದರಿಂದ ಪೂರ್ವ ಜರ್ಮನಿ ಸಮತಾವಾದಿ ಪಥದಲ್ಲಿ ಸಾಮ್ರಾಜ್ಯಶಾಹಿಗಳ ಯುದ್ಧಖೋರ ನೀತಿಯ ವಿರುದ್ಧ, ವಿಶ್ವಶಾಂತಿಗಾಗಿ ಮುಂದೆ ಸಾಗಿದೆ.

ಡಿ.ವೈ.ಎಫ್.ಐ.ನಿಂದ ಭಗತ್‌ಸಿಂಗ್ ಹುತಾತ್ಮ ದಿನಾಚರಣೆ

30-9-84 ರ ಸಂಜೆ ಹಾಸನ ಜಿಲ್ಲಾ ಸಮಿತಿಯಿಂದ ಕೃಷ್ಣ ಕಾನೂನು ಕಾಲೇಜಿನ ಆವರಣದಲ್ಲಿ ಹುತಾತ್ಮ ಭಗತ್‌ಸಿಂಗ್ ದಿನಾಚರಣೆಯನ್ನು ಆಚರಿಸಲಾಯಿತು.

ಜಿಲ್ಲಾಸಮಿತಿಯ ಸದಸ್ಯರಾದ ಸಿದ್ದೇಶ್ ಅವರು ಅಧ್ಯಕ್ಷತೆವಹಿಸಿದ್ದರು ರಾಘವೇಂದ್ರ ಅವರು ಸ್ವಾಗತ ಭಾಷಣ ಮಾಡಿದರು. ಜಿಲ್ಲಾ ಸಮಿತಿಯ ಸಂಚಾಲಕರಾದ ಕಾ. ಸಿ. ಬೂದೀಶ್ ಅವರು ಮತ್ತು ಕೃಷ್ಣ ಅವರು ಭಗತ್‌ಸಿಂಗ್ ಅವರು ಮತ್ತು ಆತನ ಸಂಗಾತಿಗಳು ಬ್ರಿಟಿಷರಿಗೆ ಸಿಂಹ ಸ್ವಪ್ನವಾಗಿದ್ದರೆಂದೂ, ಆತ ಆಧ್ಯಾತ್ಮವ್ಯಕ್ತಿಯಾಗಿರಲಿಲ್ಲವಾದರೂ ಪ್ರಸ್ತುತ ಕೆಲವು ಕೋಮುಮತೀಯ ಶಕ್ತಿಗಳು ಆತನ ಹೆಸರನ್ನು ಬಳಸಿಕೊಳ್ಳುತ್ತಿರುವುದು ವಿಷಾದನೀಯವೆಂದೂ ಮತ್ತು ಇಂದಿನ ಸ್ವತಂತ್ರ ಭಾರತದ ಆಡಳಿತಗಾರರ ಬಗ್ಗೆ ಭಗತ್‌ಸಿಂಗ್ ಯಾವ ಅಭಿಪ್ರಾಯ ಹೊಂದಿದ್ದನೋ ಅದು ಪ್ರಸ್ತುತ ನಿಜವಾಗಿದೆ ಎಂದೂ ಹಾಗೂ ನಮ್ಮ ಯುವಜನರು ಭಗತ್‌ಸಿಂಗ್ ಅವರ ಧ್ಯೇಯಗಳನ್ನು ಅಳವಡಿಸಿಕೊಂಡು ನಿರುದ್ಯೋಗ, ಅನಕ್ಷರತೆ, ಗರೀಬತನಗಳ ವಿರುದ್ಧ ಸುಘಟಿತ, ಏಕಪ್ರಕಾರ ಹೋರಾಟ ನಡೆಸಬೇಕೆಂದು ಕರೆ ನೀಡಿದರು, ಜಿ. ಸಿ. ಸತ್ಯನಾರಾಯಣ ಅವರು ವಂದನಾರ್ಪಣೆ ಮಾಡಿದರು.

ರಾಜಕೀಯ ಅಸ್ಥಿರತೆ - ರಾಜ್ಯಗಳಲ್ಲಿ ಮತ್ತು ಕೇಂದ್ರದಲ್ಲಿ

ಇ. ಎಂ. ಎಸ್. ನಂಬೂದಿರಿಪಾದ್

ನೆಮುಗಿಂತ ಸ್ವಲ್ಪ ಮೊದಲು ಅಥವಾ ಸ್ವಲ್ಪ ನಂತರ ಸ್ವಾಧೀನತೆ ಪಡೆದ ಏಷಿಯಾದ ನಮ್ಮ ನೆರೆಕರೆಯವರಿಗೆ ಹೋಲಿಸಿದರೆ ಭಾರತ ಒಂದು ರಾಜಕೀಯ ಸ್ಥಿರತೆಯನ್ನು ಅನುಭವಿಸಿದೆ ಯೆಂದು ಹೇಳಬಹುದು. ಬೇರಾವುದೇ ದೇಶದ ಕೇಂದ್ರದಲ್ಲಿ ಒಂದು ಪಕ್ಷದ ಮೂವತ್ತು ವರ್ಷಗಳ ಅಖಂಡ ಆಳ್ವಿಕೆ ಕಾಣಲಿಲ್ಲ. 1977 ರಲ್ಲಿ ಅದರ ಸ್ಥಾನದಲ್ಲಿ ಜನತಾ ಪಕ್ಷ ಬಂದರೂ ಮೂರು ವರ್ಷದಲ್ಲೇ ವಾಪಾಸ್ಸಾಗಿ, ಈಗ ಅದರ ಆಳ್ವಿಕೆ ಮುಂದುವರಿಯುತ್ತಿದೆ.

ಆದರೆ ಅದು ಈಗ ಮುಂದುವರಿಯುವ ಸಂಭವವಿಲ್ಲ. ಆ ಪಕ್ಷದ ನಾಯಕತ್ವದ ಒಂದು ಭಾಗಕ್ಕೆ ಈ ಭಯವಿದೆ. ಸಂಸದೀಯ ಪದ್ಧತಿಯಿಂದ ಅಧ್ಯಕ್ಷೀಯ ಪದ್ಧತಿಗೆ ಬದಲಾಗಬೇಕೆಂಬುದಕ್ಕೆ ಪ್ರಮುಖ ಪ್ರಚಾರಕರಾದ ವಸಂತ ಸಾಠೆ ತನ್ನ ಈ ಭಯವನ್ನು ಅಡಗಿಸಿಕೊಂಡಿಲ್ಲ. ಸಾಠೆಯವರು ಪ್ರಧಾನ ಮಂತ್ರಿಗಳ ಪೂರ್ಣ ಒಪ್ಪಿಗೆಯಿಂದಲೇ ಈ ಪ್ರಚಾರ ನಡೆಸುತ್ತಿದ್ದಾರೆಂಬುದನ್ನು ಇಲ್ಲಿಗಮನಿಸೋಣ.

ಬಹುಶಃ 1977ರ ಈ ಪುನರಾವರ್ತನೆ ಅದಕ್ಕೆ ಮತ್ತೆ ಅಧಿಕಾರದ ಅವಕಾಶ ದೊರೆಯಲಾರದೆಂಬುದರ ಮುನ್ಸೂಚನೆಯೂ ಆಗಬಹುದು. ಅಂತಹ ಒಂದು ರೋಷಕ್ಕೆ ಈ ಪದ್ಧತಿ ಬದಲಾವಣೆಯನ್ನು ಔಷಧಿಯಾಗಿ ಸೂಚಿಸಲಾಗುತ್ತಿನ.

ಹಲವು ಪ್ರಶ್ನೆಗಳು

ಈ ಬದಲಾವಣೆ ಪ್ರತಿಪಾದಿಸುತ್ತಿರುವುದು ತಮ್ಮ ಪಕ್ಷಕ್ಕಾಗಿಯಲ್ಲ, ದೇಶಕ್ಕಾಗಿ ಎನ್ನುವ ಸಾಠೆ ಹಾಗೂ ಅವರ ಸಹಯೋಗಿಗಳ ವಾದದ ರೀತಿ ಹೀಗಿದೆ– ಸತ್ಯದ ಆಳುವ ಪಕ್ಷಕ್ಕೆ ಬದಲಿಯಾದ ಒಂದು ಪಕ್ಷ ಬೇರಿಲ್ಲ. ಆದ್ದರಿಂದ ಕಾಂಗ್ರೆಸ್ ಅಧಿಕಾರ ಕಳಕೊಳ್ಳುವುದರ ಅರ್ಥ ದೇಶದಲ್ಲಿ ಅಸ್ಥಿರತೆ ಹಾಗೂ ಅರಾಜಕತೆ. 1977 ರಲ್ಲಿ ಆದದ್ದು ಇದೇ. ಜನತಾ ಪಕ್ಷ ಹಾಗೂ ಅದರ ಸರ್ಕಾರಕ್ಕೆ ತನ್ನ ಚುನಾಯಿತ ಅವಧಿಯ ಅರ್ಧದಷ್ಟು ಕಾಲ ಕೂಡಾ ಕೆಲಸ ಮಾಡಲಾಗಲಿಲ್ಲ. ಕೊನೆಗೆ ಕಾಂಗ್ರೆಸ್ಸೇತರ ಪಕ್ಷಗಳ ವಿಭಜನೆಯಾಗಿ ಕಾಂಗ್ರೆಸ್ ಮರಳಿ ಬರುವಂತಾಯಿತು. ಆದ್ದರಿಂದ ಮತ್ತೆ ಕಾಂಗ್ರೆಸ್ ಸೋತರೆ ಆದರಿಂದ ಅಸ್ಥಿರತೆ ಹಾಗೂ ಅರಾಜಕತೆಯ ಒಂದು ಯುಗದ ಆರಂಭವಾದಂತಾಗುತ್ತದೆ!

ಇಲ್ಲಿ ಹಲವು ಪ್ರಶ್ನೆಗಳು ಏಳುತ್ತವೆ. ಮೊದಲನೆಯದಾಗಿ, ಕಾಂಗ್ರೆಸ್ಸಿನ 30 ವರ್ಷಗಳ ಸತತ ಏಕ ಪಕ್ಷೀಯ ಆಳ್ವಿಕೆ ದೇಶಕ್ಕೆ ಒಂದು ಸ್ಥಿರ ರಾಜಕೀಯ ವ್ಯವಸ್ಥೆ ನೀಡಿದೆಯೇ? ಎರಡನೆಯದಾಗಿ, ಕಾಂಗ್ರೆಸ್ ಪಕ್ಷ ತನ್ನ ಸ್ಥಿರತೆಯನ್ನು ಏಕೆ ಕಳಕೊಂಡಿತು ಮೂರನೆಯದಾಗಿ, ಕಾಂಗ್ರೆಸ್ ಸ್ವಾತಂತ್ರ್ಯ ನಂತರದ 30 ವರ್ಷಗಳ ಕಾಲ ನೀಡಿದ ಈ ತೋರಿಕೆಯ ಸ್ಥಿರತೆಯನ್ನು ನೀಡಬಲ್ಲ ಬೇರಾವುದೇ ಪಕ್ಷ ಏಕೆ ಮೂಡಿಬರಲಿಲ್ಲ? ಕೊನೆಯದಾಗಿ, ಈಗ ಕಳಕಳಿಯಿಂದ ಯಾವ ಬದಲಿ ವ್ಯವಸ್ಥೆಗಾಗಿ ಕೇಳಿ ಕೊಳ್ಳಲಾಗುತ್ತಿದೆಯೋ ಅದು ದೇಶಕ್ಕೆ ಸ್ಥಿರತೆ ನೀಡಬಲ್ಲದೇ?

ಸ್ಥಿರತೆ ನೀಡಲಿಲ್ಲ

ಒಂದು ವಿಷಯ ಗಮನದಲ್ಲಿಟ್ಟುಕೊಳ್ಳಬೇಕು. ಮೊದಲ ಐದು ಲೋಕಸಭಾ ಚುನಾವಣೆಗಳಲ್ಲಿ 70 ಶೇಕಡಾ, ಕೆಲವೊಮ್ಮೆ ಇನ್ನೂ ಜಾಸ್ತಿ, ಸ್ಥಾನಗಳನ್ನು ಪಡೆದರೂ ಕೂಡಾ ಸ್ಥಾನಗಳ ಈ ಅಗಾಧ ಸಂಖ್ಯೆಯ ಹಿಂದೆ ಇದ್ದುದು ಕೇವಲ ಅಲ್ಪಮತಗಳು. ಯಾವುದೇ ಚುನಾವಣೆಯಲ್ಲಿ ಅದಕ್ಕೆ ಶೇ.50 ರಷ್ಟು ಮತ ಕೂಡಾ ದೊರೆಕಲಿಲ್ಲ. ಅಷ್ಟೇ ಅಲ್ಲ ಮೊತ್ತ ಮೊದಲ ಚುನಾವಣೆಯಲ್ಲೇ [1952] ಆ ಪಕ್ಷ ಮೂರು ರಾಜ್ಯಗಳಲ್ಲಿ [ತಿರುವಾಂಕೂರು, ಕೊಚ್ಚಿನ್, ಮದ್ರಾಸ್ ಮತ್ತು ಪೆಪ್ಸು] ಎರಡೂ ವಿಧಗಳಲ್ಲಿ ಅಲ್ಪ ಮತಕ್ಕಿಳಿಯಿತು.

ರಾಜ್ಯಗಳಲ್ಲಿನ ಈ ಪ್ರವೃತ್ತಿ ಮತ್ತಷ್ಟು ಮುಂದುವರಿಯುತ್ತ, 1957 ರಲ್ಲಿ ಎಡ ನೇತೃತ್ವದ ಸರ್ಕಾರ ಹಾಗೂ 1967 ರಲ್ಲಿ ಹಲವು ರಾಜ್ಯಗಳಲ್ಲಿ ಕಾಂಗ್ರೆಸ್ಸೇತರ ಸರ್ಕಾರಗಳ ಸ್ಥಾಪನೆಗೆ ಅವಕಾಶವಾಯಿತು.

ಅಲ್ಪಮತಗಳ ಸಹಾಯದಿಂದ "ಭಾರೀ ಬಹುಮತದ" ಸ್ಥಾನಗಳನ್ನು ಗಳಿಸಲು ಅವಕಾಶ ಮಾಡಿಕೊಡುವ ನಮ್ಮ ಚುನಾವಣಾಪದ್ಧತಿಗೆ ಕಾಂಗ್ರೆಸ್ ನಾಯಕರು ಋಣಿಗಳಾಗಿರಬೇಕು. ಕಾಂಗ್ರೆಸ್ ಒಂದು ಪಕ್ಷವಾಗಿ ನಮ್ಮ ವ್ಯವಸ್ಥೆಗೆ ಸ್ಥಿರತೆ ನೀಡಿತು ಎಂಬುದನ್ನೇನೂ ಖಂಡಿತವಾಗಿಯೂ ಇದು ತೋರಿಸುವುದಿಲ್ಲ.

ಹೀಗೆ 1952 ರ ಮಹಾಚುನಾವಣೆಗಳ ಸೋಲು ಕಾಂಗ್ರೆಸ್ಸಿಗೆ ಒಂದು ಎಚ್ಚರಿಕೆಯಾಗಿದ್ದರೂ, ತಮ್ಮ ಪಕ್ಷವನ್ನೇ ದೇಶವೆಂದು ಪರಿಗಣಿಸುವ ತರಬೇತಿ ಪಡೆದ ಆ ಪಕ್ಷದ ನಾಯಕರಿಗೆ ಬೇರೆ ಪಕ್ಷಗಳೊಂದಿಗೆ ಅಧಿಕಾರ ಹಂಚಿಕೊಳ್ಳುವ ಬಗ್ಗೆ ಯೋಚಿಸಲೂ ಸಾಧ್ಯವಿರಲಿಲ್ಲ. "ಇಂಡಿಯಾ ಇಂದಿರಾ, ಇಂದಿರಾ ಇಂಡಿಯಾ" ಘೋಷಣೆ ರಚಿಸಿದ್ದ ಸಂಗರೆವಾದರೂ ಕಾಂಗ್ರೆಸ್ ಮುಖಂಡರು ನೆಹರೂರವರಿಂದ ಹಿಡಿದು ಇಲ್ಲಿಯವರೆಗೆ ಭಾರತ ಮತ್ತು ಕಾಗ್ರೆಂಸ್ ಒಂದೇ ಎಂದು ಭಾವಿಸಿಕೊಂಡು ಬಂದಿದ್ದಾರೆ.

ಅಪಾಯ ತಪ್ಪಿಸುವ ತಂತ್ರ

ಆದರೆ ನಂತರವೂ ಯಾವುದೇ ಚುನಾವಣೆಗಳಲ್ಲಿ ಬಹು ಸಂಖ್ಯೆಯ ಮತಗಳು ಅದಕ್ಕೆ ದೊರೆಯಲಿಲ್ಲ. ಕೆಲವು ಬಾರಿ, ಕೆಲವು ರಾಜ್ಯಗಳಲ್ಲಿ ಬಹುಮತದ ಸ್ಥಾನಗಳೂ ದೊರೆಯಲಿಲ್ಲ ಆಗ ಅದು ತನ್ನನ್ನು ಆಳುವ ಪಕ್ಷವನ್ನಾಗಿ ಬದಲಿಸಿಕೊಳ್ಳಲು ಹಲವು ಕುತಂತ್ರಗಳನ್ನು ಬಳಸಿತು. 1952 ರಲ್ಲಿ ತಿರುವಾಂಕೂರು–ಕೊಚ್ಚಿನ್ ಮತ್ತು ಮದ್ರಾಸ್‌ನಲ್ಲಿ ಮಾಡಿದಂತೆ ರಾಜ್ಯಪಾಲರುಗಳನ್ನು ಬಳಸಿ ಕಾಂಗ್ರೆಸ್ಸೇತರ ಸರಕಾರ ಸ್ಥಾಪನೆಯಾಗದಂತೆ ಮಾಡಿತು. ಈ ರೀತಿ ಸ್ಥಾಪನೆಯನ್ನು ತಡೆಯಲು ಸಾಧ್ಯವಾಗದಲ್ಲಿ, 1952 ರಲ್ಲಿ ಪೆಪ್ಸುನಲ್ಲಿ ಮತ್ತು 1959 ರಲ್ಲಿ ಕೇರಳದಲ್ಲಿ ಮಾಡಿದಂತೆ ಕೇಂದ್ರದ ಅಧಿಕಾರವನ್ನು ಚಲಾಯಿಸಿ ಅವನ್ನು ಕಿತ್ತುಹಾಕಿತು; 1967–69 ರಲ್ಲಿ ಹಲವು ರಾಜ್ಯಗಳಲ್ಲಿ ಮಾಡಿದಂತೆ ಆಳುವ ಕೂಟಗಳಲ್ಲಿ ಅಸಂತುಷ್ಟಿ ಸೃಷ್ಟಿಸಿತು, ಇತ್ಯಾದಿ. ತಮಿಳುನಾಡಿನ ಡಿ.ಎಂ.ಕೆ. ಸರಕಾರವನ್ನು 1967-76 ರ ಒಂಭತ್ತು ವರ್ಷಗಳ ಕಾಲ ಈ ಯಾವ ವಿಧಾನದಿಂದಲೂ ಕೆಳಗಿಳಿಸಲು ಸಾಧ್ಯವಾಗದಾದಾಗ ಭ್ರಷ್ಟಾಚಾರದ ಆಪಾದನೆ ಹೊರಿಸಿ ವಜಾ ಮಾಡಲಾಯಿತು. ಹರ್ಯಾಣಾದಿಂದ ಹಿಡಿದು, ಜಮ್ಮು–ಕಾಶ್ಮೀರ ಮತ್ತು ಆಂಧ್ರ ಪ್ರದೇಶದ ವರೆಗಿನ ಇತ್ತೀಚಿನ ಬೆಳವಣಿಗೆಗಳು ಕಾಂಗ್ರೆಸ್ [ಐ] ಅಧಿಕಾರದಲ್ಲೇ ಮುಂದುವರಿಯಲು ಅಗತ್ಯವೆನಿಸಿದರೆ ಏನನ್ನು ಮಾಡಲೂ ಹಿಂಜರಿಯುವುದಿಲ್ಲ ಎಂಬುದಕ್ಕೆ ಉದಾಹರಣೆಗಳು.

ಆದರೆ ತಕ್ಷಣದ ಅಪಾಯ ತಪ್ಪಿಸಿಕೊಳ್ಳುವ ಈ ತಂತ್ರಗಳಿಂದಲೂ ಜನತೆಯ ನಡುವೆ ಸತತವಾಗಿ ತನ್ನ ರಾಜಕೀಯ ಸ್ಥಾನಮಾನ ಇಳಿಯುತ್ತಾ ಹೋಗುತ್ತಿರುವುದನ್ನು ತಡೆಹಿಡಿಯಲು ಅದಕ್ಕೆ ಸಾಧ್ಯವಾಗಲಿಲ್ಲ. ಕಾಂಗ್ರೆಸ್ (ಐ) ಬಗ್ಗೆ ಜನತೆಗೆ ಈಗ ಇರುವ ಗೌರವ, ಸ್ವಾತಂತ್ರ್ಯದ ಮೊದಲ ವರ್ಷಗಳಲ್ಲಿ ಕಾಂಗ್ರೆಸ್ ಬಗೆಗಿದ್ದ ಗೌರವದ ನೆರಳಷ್ಟೂ ಇಲ್ಲ; ಸ್ವಾತಂತ್ರ್ಯ ಪೂರ್ವದ ಕಾಂಗ್ರೆಸ್ಸಿನ ಜತೆಗಂತೂ ಹೋಲಿಸಲೂ ಸಾಧ್ಯವಿಲ್ಲ ಎಂಬುದನ್ನು ಕಾಂಗ್ರೆಸ್ಸಿನ ಅತ್ಯಂತ ಕಟ್ಟಾ ಅನುಯಾಯಿಗಳೂ ಒಪ್ಪುತ್ತಾರೆ. ತನ್ನ ಸಾವಿರಾರು ಸಕ್ರಿಯ ಕಾರ್ಯಕರ್ತರು ಮಾಡಿದ ನಿಸ್ವಾರ್ಥ ಸಮರ್ಪಣ ಭಾವದ ಕೆಲಸಗಳ ಮೂಲಕ ಜನತೆಯನ್ನು ಸ್ವಾತಂತ್ರ್ಯದೆಡೆಗೆ ಒಯ್ದ ಕಾಂಗ್ರೆಸ್ ಸ್ವಾತಂತ್ರ್ಯನಂತರದ ಕಾಲದಲ್ಲಿ ಅಧಿಕಾರ, ಹಣದ ಬೆಂಬತ್ತಿದ ನೀತಿಹೀನರ ಗುಂಪಾಗಿ ಬಿಟ್ಟಿತು. ಇದನ್ನು ಮೊದಲಾಗಿ ಯೋಚಿಸಿಯೇ ಬಹುಶಃ ರಾಷ್ಟ್ರಪಿತ ಮಹಾತ್ಮಾಗಾಂಧಿ ಸ್ವತಂತ್ರ ಭಾರತದಲ್ಲಿ ಕಾಂಗ್ರೆಸ್ಸಿನ ಸಂವಿಧಾನದ ಕರಡಿನಲ್ಲಿ ಹೀಗೆ ಬರೆದರು —

"ಪ್ರಚಾರ ಮಾಧ್ಯಮ ಹಾಗೂ ಸಂಸದೀಯ ಯಂತ್ರವಾಗಿ ಕಾಂಗ್ರೆಸ್ಸಿನ ಈಗಿನಸ್ವರೂಪ ಹಾಗೂ ಆಕಾರ ಇನ್ನು ಉಪಯೋಗವಿಲ್ಲ. ಭಾರತದ ನಗರ ಪಟ್ಟಣಗಳ ದೃಷ್ಟಿಯಿಂದಲ್ಲದೆ, ಏಳು ಲಕ್ಷ ಹಳ್ಳಿಗಳ ದೃಷ್ಟಿಯಿಂದ ಸಾಮಾಜಿಕ, ನೈತಿಕ ಹಾಗೂ ಆರ್ಥಿಕ ಸ್ವಾತಂತ್ರ್ಯ ಇನ್ನೂ ಪಡೆಯಬೇಕಷ್ಟೆ. ಪ್ರಜಾಪ್ರಭುತ್ವದ ಗುರಿಯತ್ತ ಭಾರತದ ಪ್ರಗತಿಯಲ್ಲಿ ಸೈನಿಕ ಶಕ್ತಿ ಮೇಲೆ ನಾಗರಿಕ ಶಕ್ತಿಯ ಮೇಲ್ಮೆಯ ಹೋರಾಟ ನಡೆದೇ ನಡೆಯುತ್ತದೆ. ರಾಜಕೀಯ ಪಕ್ಷಗಳು ಹಾಗೂ ಕೋಮು ಸಂಸ್ಥೆಗಳೊಂದಿಗೆ ಕಾಂಗ್ರೆಸ್ ಅನಾರೋಗ್ಯಕರ ಸ್ಪರ್ಧೆಗೆ ಇಳಿಯಬಾರದು. ಈ ಹಾಗೂ ಇಂತಹ ಇತರ ಕಾರಣಗಳಿಂದಾಗಿ ಅಖಿಲ ಭಾರತ ಕಾಂಗ್ರೆಸ್ ಸಮಿತಿ ಈಗಿನ ಕಾಂಗ್ರೆಸ್ ಸಂಘಟನೆಯನ್ನು ವಿಸರ್ಜಿಸಿ ಲೋಕ ಸೇವಕ ಸಂಘವಾಗಿ ಅರಳಲು ನಿರ್ಣಯಿಸುತ್ತದೆ."

ನೆಹರೂರ ಪ್ರಜಾಪ್ರಭುತ್ವ ವಿರೋಧೀ ದಾಖಲೆ

ಆದರೆ ಸ್ವತಂತ್ರ ಭಾರತದಲ್ಲಿ ಅಧಿಕಾರ ವಹಿಸಿಕೊಂಡ ಮಹಾತ್ಮರ ಶಿಷ್ಯರಿಗೆ ಈ ನೈತಿಕ ಬೋಧನೆ ನಿರುಪಯುಕ್ತವಾಗಿತ್ತು. ಮಹಾತ್ಮರಿಗೆ ಅದು ಅಗ್ರಾಹ್ಯವಾಗಿದ್ದರೂ ಪ್ರತಿಸ್ಪರ್ಧಿ ರಾಜಕೀಯ ಪಕ್ಷಗಳು ಹಾಗೂ ಕೋಮು ಸಂಸ್ಥೆಗಳೊಂದಿಗೆ ಸ್ಪರ್ಧೆಗೆ ಇಳಿಯಲು ಮಾತ್ರವಲ್ಲ, ಅದನ್ನು ಗೆಲ್ಲಬೇಕೆಂದು ಕೂಡಾ ಭಾರತೀಯ ಬೂರ್ಜ್ವಾ ವರ್ಗದ ಪ್ರಮುಖ ರಾಜಕೀಯ ಪಕ್ಷದ ವ್ಯವಹಾರ ಬುದ್ಧಿಯ ನಾಯಕರು ನಿರ್ಧರಿಸಿದರು.

ಜವಾಹರಲಾಲ್ ನೆಹರೂರವರ ಪ್ರಧಾನಮಂತ್ರಿತ್ವದ 17 ವರ್ಷಗಳನ್ನು ಅಧ್ಯಯನ ಮಾಡಿದರೆ ಆತನ ರ್‍ಯಾಡಿಕಲ್ ನಿಲುವು ಹಾಗೂ ಪ್ರಜಾಪ್ರಭುತ್ವದ ಹಿಂದೆ ಆತ ತನ್ನ ಸ್ವಂತ ಪಕ್ಷದ ಅಧಿಕಾರಕ್ಕಾಗಿ ಮಾತ್ರ ಹೋರಾಡಿದರು ಎಂಬ ಸತ್ಯವನ್ನು ಕಾಣಬಹುದು. ರಾಜ್ಯಗಳ ಚುನಾಯಿತ ಸರಕಾರಗಳನ್ನು ವಜಾ ಮಾಡಲು ಕೇರಳದಲ್ಲಿ ಮಾಡಿದಂತೆ ತನ್ನ ಪಕ್ಷದ ಅಧಿಕಾರಕ್ಕೆ, ತನ್ನ ಎಡಪಂಥೀಯ ವೇಷಕ್ಕೆ ಸವಾಲೆಸೆದ ಒಂದು ಪಕ್ಷ ಅಧಿಕಾರಕ್ಕೆ ಬರದಂತೆ ಜಾತಿ, ಕೋಮು ಪಕ್ಷಗಳೊಂದಿಗೆ ಅಪವಿತ್ರ ಕೂಟ ರಚಿಸಿಕೊಳ್ಳಲು ಆತ ಹಿಂಜರಿಯಲಿಲ್ಲ.

ಆತನ ದಾಖಲೆಯನ್ನು ಆತನ ಉತ್ತರಾಧಿಕಾರಿ ಹಾಗೂ ಮಗಳು ಮತ್ತಷ್ಟು ಉತ್ತಮ ಪಡಿಸಿದರು ಎಂಬುವೇನೋ ನಿಜ. ಕಮ್ಯುನಿಸ್ಟರನ್ನು ಮಾತ್ರವಲ್ಲ, ಇತರ ವಿರೋಧ ಪಕ್ಷಗಳನ್ನೂ ಅಧಿಕಾರಕ್ಕೆ ಬರದಂತೆ ಮಾಡುವ ಕಲೆಯನ್ನು ಮತ್ತಷ್ಟು ಆಕೆ ಸಂಪೂರ್ಣ ಗೊಳಿಸಿದಳು. ಆದರೂ ಆಕೆಯ ತಂದೆಯಲ್ಲಿದ್ದ ಅಲಂಕಾರಿಕ ಮೆರಗು, ನಾಜೂಕುತನ ಆಕೆಯಲ್ಲಿಲ್ಲ.

ಆದರೆ ಮೊದಲು 1967ರಲ್ಲಿ ನಂತರ 1977 ರಲ್ಲಿ ಆಳುವ ಪಕ್ಷದ ಅಧಿಕಾರವನ್ನು ಶಾಶ್ವತ ಗೊಳಿಸುವಲ್ಲಿ ಗಂಭೀರ ತೊಂದರೆಗಳಿವೆಯೆಂದು ಕಂಡುಬಂದಾಗ ಈಗಿನ ಸಂಸದೀಯ ಪದ್ಧತಿ ಭಾರತಕ್ಕೆ ತಕ್ಕುದಲ್ಲವಾದ್ದರಿಂದ ಅದನ್ನು ಅಧ್ಯಕ್ಷೀಯ ಪದ್ಧತಿಗೆ ಬದಲಿಸಬೇಕೆಂಬ ವಿಚಾರ ಕೇಳ ಬಂತು. ಆದರೆ ಅದಕ್ಕೆ ಕೋಪೋದ್ರಿಕ್ತ ವಿರೋಧ ಕಂಡುಬಂದುದರಿಂದ ಆಗ ಅದು ತಣ್ಣಗಾಯಿತು.

ನಿಜವಾದ ಪ್ರಶ್ನೆ

ಈಗ ನಮ್ಮೆದುರಿರುವುದು ಅಧ್ಯಕ್ಷೀಯ ಪದ್ಧತಿ ತಾನಾಗಿಯೇ ನಮಗೆ ಒಳ್ಳೆಯದೋ ಕೆಟ್ಟದೋ ಎಂಬ ಪ್ರಶ್ನೆಯಲ್ಲ. ಆ ಪ್ರಶ್ನೆಯ ಬಗ್ಗೆ ಸಂವಿಧಾನ ಸಭೆ ಆಳವಾದ ಚರ್ಚೆ ನಡೆಸಿ ಭಾರತದ ಪರಿಸ್ಥಿತಿಯಲ್ಲಿ ಸಂಸತ್ತಿಗೆ ಜವಾಬ್ದಾರವಾಗಿರುವ ಕಾರ್ಯಾಂಗ ಇರುವುದೇ ವಾಸಿಯೆಂಬ ನಿರ್ಣಯಕ್ಕೆ ಬಂದಿತ್ತು. ಮೂರು ದಶಕಗಳ ಕಾಲ ಈ ವ್ಯವಸ್ಥೆಯಲ್ಲಿ ದುಡಿದ ನಂತರ ಈಗ ಅದನ್ನು ಬದಲಿಸಬೇಕೆಂದು ಏಕೆ ಸೂಚಿಸಲಾಗುತ್ತಿದೆ? ವಾಸ್ತವವಾಗಿ ಸಮಸ್ಯೆಯ ಸಾರವೆಂದರೆ ಕಾಂಗ್ರೆಸ್ ಬಗ್ಗೆ ಜನತೆಯಲ್ಲಿ ವಿಶ್ವಾಸ ಕಮ್ಮಿಯಾಗುತ್ತಿರುವುದು. ಈ ಸಮಸ್ಯೆಯನ್ನು ಪರಿಹರಿಸುವಲ್ಲಿ ಈ ಪದ್ಧತಿ ಬದಲಾವಣೆ ಹೇಗೆ ನೆರವಾಗುತ್ತದೆ?

ಕಳೆದ ಮೂರು ದಶಕಗಳ ಬೆಳವಣಿಗೆಗಳು ಸಂವಿಧಾನ ರಚನೆಯ ಒಂದು ಆಧಾರಭೂತ ಭಾವನೆಯನ್ನು ನಿರರ್ಥಕಗೊಳಿಸಿವೆ. ಎಂಬುದೇನೋ ನಿಜವೇ. ಕಾಂಗ್ರೆಸ್ ಒಂದು ಪಕ್ಷವಾಗಿ ತನ್ನ ಪ್ರಬಲ ಸ್ಥಾನವನ್ನು ಕಳಕೊಳ್ಳುತ್ತಿದೆ. ಆದ್ದರಿಂದ ನಮ್ಮ ರಾಜಕೀಯ ವ್ಯವಸ್ಥೆಗೆ ಸ್ಥಿರತೆ ನೀಡಲು ಶಕ್ತವಾಗ ಬೇಕಾದರೆ ತಮಿಳ ನಾಡು, ಕೇರಳ ಹಾಗೂ

ಇತರ ರಾಜ್ಯಗಳಲ್ಲಿ ಮಾಡಿರುವಂತೆ ಇತರ ಪಕ್ಷಗಳೊಂದಿಗೆ ಸೇರಬೇಕಾಗಿದೆ.

ಹೀಗೆ ಕಾಂಗ್ರೆಸ್ಸಿನ ಏಕಪಕ್ಷೀಯ ಪ್ರಾಬಲ್ಯ ಮುಗಿದಿದ್ದರೂ ಬೇರಾವುದೇ ಪಕ್ಷ ಅಖಿಲ-ಭಾರತ ಮಟ್ಟದಲ್ಲಿ ಆ ಸ್ಥಾನಕ್ಕೆ ಬರಲು ಸಾಧ್ಯವಾಗಿಲ್ಲ ಆರೇಳು ರಾಜ್ಯಗಳಲ್ಲಿ ಕೆಲವು ಪಕ್ಷಗಳು ಅಥವಾ ಪಕ್ಷಗಳ ಕೂಟಗಳು ಸ್ಥಿರ ಆಡಳಿತವನ್ನು (ಕೇಂದ್ರದ ಆಳುವ ಪಕ್ಷ ಕಾಂಗ್ರೆಸ್ ಮಾಡುತ್ತಿರುವಂತೆ ಉರುಳಿಸುವ ಆಟದಲ್ಲಿ ತೊಡಗದಿದ್ದರೆ) ನೀಡಲು ಶಕ್ತವಾಗಿವೆ ಎಂಬುದು ಬೇರೆ ಮಾತು. ಇದರಿಂದೇಳುವ ಸಮಸ್ಯೆಗಳಿಗೆ ಈಗ ಸೂಚಿಸಲಾಗುತ್ತಿರುವ "ಪದ್ಧತಿ ಬದಲಾವಣೆ" ಏನಾದರೂ ಪರಿಹಾರ ನೀಡಬಲ್ಲುದೇ ಎಂಬುದೇ ಈಗ ಪ್ರಶ್ನೆ.

ಕಮ್ಯೂನಿಸ್ಟರ ನಿಲುವು

ಇದಕ್ಕೆ ವ್ಯತಿರಿಕ್ತವಾಗಿ, ಈ ಬದಲಾವಣೆ ಇತರ ಪಕ್ಷಗಳ ನೇತೃತ್ವದಲ್ಲಿರುವ ರಾಜ್ಯಗಳ ಚುನಾಯಿತ ಸರಕಾರಗಳ ಸರ್ವಶಕ್ತ ಕೇಂದ್ರ ಸರಕಾರ ವಿರುದ್ಧವಾಗಿ ನಿಲ್ಲುವ ಸಮಸ್ಯೆ ಮತ್ತಷ್ಟು ಉಲ್ಬಣಗೊಳ್ಳಬಹುದು. ಕಾಂಗ್ರೆಸ್ ಇತರ ಪಕ್ಷಗಳ ನಾಯಕತ್ವದ ಸರಕಾರಗಳನ್ನು ಉರುಳಿಸುವ ತನ್ನ ಧೋರಣೆ ಬದಲಿಸದಿದ್ದರೆ ರಾಜ್ಯಗಳು ಹಾಗೂ ಕೇಂದ್ರದ ಸರಕಾರಗಳ ನಡುವಿನ ಸಂಬಂಧಗಳು ಕೆಡುತ್ತಾ ಹೋಗಬಹುದು. ಅಂತಿಮವಾಗಿ ಈ ತೀವ್ರ ಕಾದಾಟ ರಾಜ್ಯಗಳು ಹಾಗೂ ಅವುಗಳ ಚುನಾಯಿತ ವಿಧಾನ ಸಭೆಗಳು ಹಾಗೂ ಸರಕಾರಗಳನ್ನೇ ನಿರ್ಮೂಲಗೊಳಿಸಬಹುದು. "ಪದ್ಧತಿ ಬದಲಾವಣೆ" ತರಲು ಅವಕಾಶಕೊಟ್ಟರೆ ಇದೇ ಅದರ ಮುಂದಿನ ಹೆಜ್ಜೆಯಾಗುತ್ತದೆ.

ನಿಜ ಸಂಗತಿಯೇನೆಂದರೆ ಈಗ ಸೂಚಿಸಲಾಗುತ್ತಿರುವ ಪದ್ಧತಿ ಬದಲಾವಣೆ ರೋಗವನ್ನು ಸರಿಯಾಗಿ ಪರೀಕ್ಷಿಸದೇ ಸೂಚಿಸಿರುವ ಔಷಧಿಯಾಗಿದೆ. ರೋಗದ ಮೂಲ ಇರುವುದು ಸಂವಿಧಾನದ ರಚನೆಗಳಲ್ಲಿ ಅಲ್ಲ, ಬದಲಿಗೆ ಆಳುವ ಪಕ್ಷದ ಯಾವ ಆರ್ಥಿಕ ನಿಲುವು ಹಾಗೂ ಧೋರಣೆಗಳ ಆಧಾರದ ಮೇಲೆ ಸಂವಿಧಾನವನ್ನು ದುಡಿಸಿಕೊಳ್ಳಲಾಗುತ್ತಿದೆಯೋ ಆ ನಿಲುವು ಹಾಗೂ ಧೋರಣೆಗಳಲ್ಲಿದೆ.

ಕಮ್ಯೂನಿಸ್ಟರು ಆರಂಭದಿಂದಲೇ ಇದನ್ನೆಲ್ಲಾ ಬೊಟ್ಟುಮಾಡಿ ತೋರಿಸುತ್ತಾ ಬಂದಿದ್ದಾರೆ. ಆಳುವ-ಪಕ್ಷ ಅನುಸರಿಸಿರುವ ಬಂಡವಾಳಶಾಹೀ ಮಾರ್ಗ ದೇಶವನ್ನು ಸರ್ವತೋಮುಖ ಹಾಗೂ ಸದಾ ಆಳವಾಗುತ್ತಿರುವ ಬಿಕ್ಕಟ್ಟಿನೆಡೆಗೆ ಒಯ್ಯುತ್ತದೆ. ಈ ಬಿಕ್ಕಟ್ಟು ವ್ಯಾಪಕ ಸಾಮಾಜಿಕ ಅಸಂತೃಪ್ತಿ ಹುಟ್ಟಿಸದಿರದು, ಫಲವಾಗಿ ಕೋಟಿಗಟ್ಟಲೆ ಜನಗಳನ್ನು ಆಳುವ ಪಕ್ಷಗಳ ಧೋರಣೆಗಳ ವಿರುದ್ಧ ಹೋರಾಟಕ್ಕೆ ಇಳಿಸುತ್ತದೆ. ಜಾತಿ, ಕೋಮು ಹಾಗೂ ಇತರ ವಿಚ್ಛಿದ್ರಕಾರೀ ಶಕ್ತಿಗಳು ಸಾಮ್ರಾಜ್ಯಶಾಹಿಯ ಪೂರ್ಣ ಬೆಂಬಲದೊಂದಿಗೆ ಈ ಅಸಂತೃಪ್ತಿಯ ದಿಕ್ಕುಗೆಡಿಸಿ ಅಸ್ಥಿರತೆ ತರುತ್ತವೆ. ವಿರೋಧ ಪಕ್ಷಗಳಲ್ಲಿ ಕೆಲವು ಪಕ್ಷಗಳು ಅಥವಾ ಗುಂಪುಗಳು ತಮ್ಮ ಸಂಕುಚಿತ ಸ್ವಾರ್ಥಕ್ಕೆ ಬಳಸಿಕೊಳ್ಳಬಹುದು. ಇವೆಲ್ಲದರ ಒಟ್ಟು ಪರಿಣಾಮವಾಗಿ, ರಾಜ್ಯಗಳಲ್ಲಿ ಹಾಗೂ ಕೇಂದ್ರದಲ್ಲಿನ ಸಾಮಾಜಿಕ ರಾಜಕೀಯ ವ್ಯವಸ್ಥೆಯಲ್ಲಿ ತೀವ್ರ ಅಸ್ಥಿರತೆ ಕಂಡುಬರಬಹುದು ಎಂದೆಲ್ಲಾ ಕಮ್ಯೂನಿಸ್ಟರು ಹೇಳುತ್ತಲೇ ಬಂದಿದ್ದಾರೆ.

ಹೋರಾಟ ಮುಂದುವರಿಯುತ್ತಿದೆ

ರೋಗದ ಸ್ವರೂಪ ಇದು. ಆದ್ದರಿಂದ ಅದಕ್ಕೆ ಈ ಧೋರಣೆಗಳನ್ನು ಸಂಪೂರ್ಣವಾಗಿ ಬದಲಿಸುವುದೇ ಸರಿಯಾದ ಔಷಧಿ. ಇದಕ್ಕಾಗಿ ಹೋರಾಟ 1952 ರಿಂದಲೇ ಆರಂಭವಾಯಿತು. ದೇಶದ ಹಲವೆಡೆ ಕಾಂಗ್ರೆಸ್ಸಿಗೆ ಬಂದ ಹಲವು ಜಾತಿ, ಕೋಮು ಹಾಗೂ ಪ್ರತ್ಯೇಕತಾವಾದಿ ಬಲಪಂಥೀ ಶಕ್ತಿಗಳ ಪಾಲಿಗೆ ತದ್ವಿರುದ್ಧವಾಗಿ 1952 ರಿಂದಲೇ ಕಾಂಗ್ರೆಸ್ಸಿಗೆ ಒಂದು ಎಡ ಪಂಥೀಯ ವಿರೋಧ [ಕಮ್ಯೂನಿಸ್ಟ್ ಪಕ್ಷದ ನೇತೃತ್ವದಲ್ಲಿ] ಮೂಡಿ ಬಂದಿತ್ತು ಎಂಬುದನ್ನು ನಾವಿಲ್ಲಿ ಜ್ಞಾಪಿಸಿಕೊಳ್ಳಬೇಕು. ವಸ್ತುತಃ ಸಂಸತ್ತು ಹಾಗೂ ನಾಲ್ಕು ರಾಜ್ಯಗಳಲ್ಲಿ ಕಮ್ಯೂನಿಸ್ಟ್ ಪಕ್ಷ ಪ್ರಮುಖ ವಿರೋಧ ಪಕ್ಷವಾಯಿತು. ಅಂದು ಆರಂಭವಾದ ಆ ಹೋರಾಟ ಈಗಲೂ ಮುಂದುವರಿಯುತ್ತಿದೆ.

ಈಗ ಕಮ್ಯೂನಿಸ್ಟ್ ಹಾಗೂ ಇತರ ಎಡ ಪಂಥೀಯರೊಂದಿಗೆ ಆಳುವ ಪಕ್ಷದ ಧೋರಣೆಗಳಿಗೆ ನಿಜವಾದ ಪರ್ಯಾಯವಾಗಿ ರೂಪುಗೊಂಡಿರುವ ಸಾಮಾಜಿಕ—ಆರ್ಥಿಕ ಹಾಗೂ ರಾಜಕೀಯ ಧೋರಣೆಗಳಿಗಾಗಿ ಹೋರಾಡಲು ವಿರೋಧ ಪಕ್ಷಗಳ ಬಹಳ ದೊಡ್ಡ ವಿಭಾಗವೊಂದು ಸಿದ್ಧವಾಗಿದೆ. ಆದರೂ ಈಗ ಸ್ಪಷ್ಟ ರೂಪ ಪಡೆದುಕೊಂಡಿರುವ ಎಡ ವಿರೋಧ ಚುನಾವಣಾ ದೃಷ್ಟಿಯಿಂದ ಇನ್ನೂ ಕಾಂಗ್ರೆಸ್[ಐ]ಗೆ ರಾಷ್ಟ್ರೀಯಪರ್ಯಾಯವಾಗುವಷ್ಟು ಬಲಶಾಲಿಯಾಗಿಲ್ಲ. ಆದ್ದರಿಂದ ಕೇಂದ್ರದಲ್ಲಿ ಆಳುವ ಪಕ್ಷದಲ್ಲಿ ಸ್ಥಾನ ಪಡೆಯಬಲ್ಲೆನೆಂದು ಹೇಳಲು ಅದಕ್ಕೆ ಸಾಧ್ಯವಿಲ್ಲ. ಇತರರಿಗೆ ಹೋಲಿಸಿದರೆ ಅದು ಬಲಶಾಲಿಯಾಗಿರುವ ರಾಜ್ಯಗಳಲ್ಲಿ ಕಾಂಗ್ರೆಸ್ [ಐ] ಗೆ ಧೋರಣೆಗಳ ದೃಷ್ಟಿಯಿಂದ ಒಂದು ಚುನಾವಣಾ ಪರ್ಯಾಯ ನೀಡಲು ಸಾಧ್ಯವಾಗಬೇಕಾದರೆ ಅದಕ್ಕೆ ಇತರ ಪ್ರಜಾಪ್ರಭುತ್ವ ಶಕ್ತಿಗಳ ಬೆಂಬಲ ಬೇಕಾಗಿದೆ. ಅದರೆ ಹಾಗೂ ಇತರ ವಿರೋಧೀ ಶಕ್ತಿಗಳ ನಡುವೆ ಧೋರಣೆಗಳ ಬಗ್ಗೆ ಒಂದು ಆರೋಗ್ಯಕರ ಹೋರಾಟ ವಾತಾವರಣವನ್ನು ತಿಳಿಗೊಳಿಸಲು ಸಹಾಯಕವಾಗುತ್ತದೆ.

ಅತ್ಯಾವಶ್ಯಕ ಬದಲಾವಣೆಗಳು

ಆದರೆ ಹೀಗಾಗಬೇಕಾದರೆ ಸದ್ಯದ ಚುನಾವಣಾ ಹಾಗೂ ರಾಜಕೀಯ ವ್ಯವಸ್ಥೆಯಲ್ಲಿ ಈ ಕೆಲವು ಮೂಲಭೂತ ಬದಲಾವಣೆಗಳಾಗಬೇಕಾಗಿದೆ.

1. ಈಗಿನ ಚುನಾವಣಾ ವ್ಯವಸ್ಥೆಯ ಬದಲು ಆನುಪಾತಿಕ ಪ್ರಾತಿನಿಧ್ಯದ ವ್ಯವಸ್ಥೆ ತರಬೇಕು. ಇದರಲ್ಲಿ ಮತದಾರರು ವ್ಯಕ್ತಿಗಳನ್ನು ಆರಿಸುವ ಬದಲು ರಾಜಕೀಯ ಪಕ್ಷಗಳು ಹಾಗೂ ಸಾಮಾಜಿಕ ಸಂಘಟನೆಗಳನ್ನು ಆರಿಸುತ್ತಾರೆ. ಇದರಿಂದಾಗಿ ಕೇವಲ ಅಲ್ಪ ಸಂಖ್ಯೆಯ ಬೆಂಬಲ ಪಡೆದ ಒಂದು ರಾಜಕೀಯ ಪಕ್ಷ ಚುನಾವಣೆಗಳಲ್ಲಿ ಭಾರೀ ಗೆಲುವು ಗಳಿಸಿ ದೇಶದ ನಿಜವಾದ ಪ್ರತಿನಿಧಿಯೆಂದು ಹೇಳಿಕೊಳ್ಳುವುದು ತಪ್ಪುತ್ತದೆ. ತಾನು ಪಡೆದ ಮತಗಳಿಗೆ ಅನುಪಾತದಲ್ಲಿ ಪ್ರತಿಯೊಂದು ಪಕ್ಷವೂ ಸ್ಥಾನ ಗಳಿಸುವುದರಿಂದಾಗಿ ಅತ್ಯಂತ ದೊಡ್ಡ ಪಕ್ಷ ಕೂಡಾ ಇತರ ಪಕ್ಷಗಳೊಂದಿಗೆ ರಾಜಕೀಯ ಕೂಟ ಏರ್ಪಡಿಸಿಕೊಳ್ಳಬೇಕಾಗುತ್ತದೆ. ಇದರಿಂದ ಧೋರಣೆಗಳನ್ನು ಕುರಿತಂತೆ ಹೋರಾಟಕ್ಕೆ ಅವಕಾಶವಾಗುತ್ತದೆ.

2. ಸಂವೈಧಾನಿಕ ಯಂತ್ರ ವಿಫಲಗೊಂಡಿದೆ ಎಂಬ ನೆವದ ಮೇಲೆ ಒಂದು ರಾಜ್ಯದ ಆಡಳಿತವನ್ನು ವಹಿಸಿಕೊಳ್ಳಲು ರಾಷ್ಟ್ರಪತಿಗಳಿಗೆ ಅಧಿಕಾರ ನೀಡುವ ಸಂವಿಧಾನದ 356ನೇ ವಿಧಿಯನ್ನು ರದ್ದುಮಾಡಬೇಕು.

3. ಕೇಂದ್ರ ಸರಕಾರದಿಂದ ನೇಮಕಗೊಂಡು, ಅದರ ಏಜೆಂಟರಂತೆ ವರ್ತಿಸುವ ರಾಜ್ಯಪಾಲರ ಹುದ್ದೆಯನ್ನು ತೆಗೆದುಹಾಕಬೇಕು. ಈ ಹುದ್ದೆ ಅಗತ್ಯವೆ ಎಂಬ ಪ್ರಶ್ನೆಯನ್ನು ಪರಿಶೀಲಿಸಿ, ಅದನ್ನು ಮುಂದುವರಿಸಬೇಕೆಂದು ನಿರ್ಧರಿಸಿದರೆ ರಾಜ್ಯದ ಚುನಾಯಿತ ಸರಕಾರದೊಡನೆ ಸಮಾಲೋಚಿಸಿ, ಅದರ ಅಭೀಷ್ಟಗಳಿಗೆ ಅನುಸಾರವಾಗಿ ರಾಜ್ಯಪಾಲರುಗಳನ್ನು ನೇಮಿಸುವಂತೆ ಹಾಗೂ ಅವರು ಕಾರ್ಯ ನಿರ್ವಹಿಸುವಂತೆ, ಅದರ ಅಭೀಷ್ಟಗಳಿಗೆ ವಿರುದ್ಧವಾಗಿ ವರ್ತಿಸದಂತೆ ವಿಧಿಸಬೇಕು. ಜನತೆಯ ಚುನಾಯಿತ ಪ್ರತಿನಿಧಿಗಳನ್ನೊಳಗೊಂಡ ಮಂತ್ರಿಮಂಡಲ ಹಾಗೂ ಕೇಂದ್ರದ ಏಜೆಂಟನಾಗಿ ವರ್ತಿಸುವ ರಾಜ್ಯಪಾಲ ಹೀಗೆ ಎರಡು ಸಮಾನಾಂತರ ಅಧಿಕಾರ ಕೇಂದ್ರಗಳನ್ನು ಸೃಷ್ಟಿಸುವಂತೆ ಮಾಡುವ ಪದ್ಧತಿ ಹೋಗಬೇಕು.

4. ಕೇಂದ್ರ-ರಾಜ್ಯಗಳ ಸಂಬಂಧದ ಜ್ವಲಂತ ಪ್ರಶ್ನೆಯನ್ನು ಪ್ರಜಾಸತ್ತಾತ್ಮಕವಾಗಿ ಪರಿಹರಿಸಬೇಕು. ತನ್ಮೂಲಕ ದೇಶದ ಸ್ವಾತಂತ್ರ್ಯವನ್ನು, ಸಾರ್ವಭೌಮತೆಯನ್ನು ಹಾಗೂ ಐಕ್ಯತೆಯನ್ನು ರಕ್ಷಿಸುವ ತನ್ನ ಪ್ರಾಥಮಿಕ ಕರ್ತವ್ಯವನ್ನು ನೆರವೇರಿಸುವ ಸಾಮರ್ಥ್ಯವುಳ್ಳ ಒಂದು ಬಲಿಷ್ಟ ಕೇಂದ್ರ ಮತ್ತು ಜನತೆಯ ಸರ್ವತೋಮುಖ ಅಭಿವೃದ್ಧಿಗೆ ಸಂಬಂಧಪಟ್ಟಂತೆ ತಮ್ಮ ಕರ್ತವ್ಯಗಳನ್ನು ಪೂರೈಸಲು ರಾಜ್ಯಗಳಿಗೆ ಅವಕಾಶವಿರುವಂತಹ ಒಂದು ನಿಜವಾಗಿಯೂ ಒಕ್ಕೂಟ ಸ್ವರೂಪದ ರಾಜಕೀಯ ವ್ಯವಸ್ಥೆ ಬರುವಂತಾಗಬೇಕು.

ಈ ಎಲ್ಲಾ ಬದಲಾವಣೆಗಳನ್ನು ಈಗ ಅತ್ಯಗತ್ಯವಾಗಿ ಪರಿಶೀಲಿಸಬೇಕಾಗಿ ಬಂದಿದೆ. ಆದರೆ ಈಗ ಕಾಂಗ್ರೆಸ್ಸಿಗರು ಸೂಚಿಸುತ್ತಿರುವ ಪದ್ಧತಿ ಇವುಗಳಲ್ಲಿ ಪ್ರತಿಯೊಂದನ್ನೂ ನಿರಾಕರಿಸುವಂತಹುದು. ಈ ಪದ್ಧತಿ ಅಸ್ಥಿರತೆಯ ಸಮಸ್ಯೆಯನ್ನು ಪರಿಹರಿಸುವ ಬದಲು ಮತ್ತಷ್ಟು ಉಲ್ಬಣಗೊಳಿಸಬಲ್ಲುದಷ್ಟೇ.

ಕಾಂಗ್ರೈ ಪ್ರಚಾರಕ್ಕೆ ವಿದೇಶಿ ಮಾಧ್ಯಮದ ಸಹಾಯ

ಮುಂಬರುವ ಲೋಕಸಭೆ ಚುನಾವಣೆಯಲ್ಲಿ ತಾನು ಬಹುಮತ ಪಡೆಯುವ ಸಾಧ್ಯತೆಗಳು ಮಸುಕಾಗಿರುವುದರಿಂದ, ಮತದಾರರನ್ನು ಮರುಳುಗೊಳಿಸಿ ಮತ ಪಡೆಯುವ ಉದ್ದೇಶದಿಂದ ತನ್ನ ಪಕ್ಷದ ಚುನಾವಣಾ ಪ್ರಚಾರದ ಸಂಪೂರ್ಣ ಜವಾಬ್ದಾರಿಯನ್ನು ಅಮೇರಿಕನ್ ಹಿಲ್ ಮತ್ತು ನೋಲ್‌ಟನ್ ಎಂಬ ಪ್ರಚಾರ ಪ್ರಸಿದ್ಧ ಕಂಪೆನಿಗೆ ಒಪ್ಪಿಸುವ ಪ್ರಯತ್ನ ನಡೆಸಿದೆ. ಈ ಸುದ್ದಿ ಬಯಲಾಗಿರುವುದರಿಂದ ರಾಜೀವಗಾಂಧಿ ಇದನ್ನು ನಿರಾಕರಿಸುತ್ತಿದ್ದಾರೆ.

ಇತ್ತೀಚೆಗೆ ರಾಜೀವಗಾಂಧಿ ಜಿನೇವಾಕ್ಕೆ ಹೋದಾಗ ತಮ್ಮ ತಾಯಿಯ ಹಾಗೂ ಪಕ್ಷದ ಪ್ರಚಾರ ನಡೆಸುವ ಜವಾಬ್ದಾರಿಯನ್ನು ಹಿಲ್ ಮತ್ತು ನೋಲಟನ್ ಗೆ ಒಪ್ಪಿಸುವ ಸಲುವಾಗಿ ಆ ಕಂಪೆನಿಯ ಮೇಲ್ದರ್ಜೆಯ ಅಧಿಕಾರಿಯನ್ನು ಸಂಪರ್ಕಿಸಿದ್ದರೆಂದು ಸುದ್ದಿ. ರಾಜೀವ ಗಾಂಧಿಯ ಬೆಂಬಲಿಗರು ಅದನ್ನು ನಿರಾಕರಿಸುತ್ತಿದ್ದರೂ ಕೂಡ ಅಮೇರಿಕದ ಸಾರ್ವಜನಿಕ ಸಂಪರ್ಕದ ಹಿಲ್-ನೋಲ್‌ಟನ್ ಕಂಪೆನಿ ಅದನ್ನು ನಿರಾಕರಿಸಲಿಲ್ಲ.

ತನ್ನ ಬಂಡವಾಳಶಾಹಿ-ಭೂಮಾಲಕ ಪರ ಆರ್ಥಿಕ ನೀತಿಯಿಂದಾಗಿ ದೇಶದ ಜನರ ಸಮಸ್ಯೆಗಳನ್ನು ಬಗೆಹರಿಸಲು ಇಂದಿರಾ ಗಾಂಧಿಗೆ ಸಾಧ್ಯವಾಗದಿರುವುದರಿಂದ, ಅಮೇರಿಕದ ಸಾರ್ವಜನಿಕ ಸಂಬಂಧದ ಪ್ರಚಾರ ಕಂಪೆನಿಗೆ ತನ್ನ ಸಹಾಯಕ್ಕೆ ಬರುವಂತೆ ಮೊರೆಹಾಕಿದ್ದರಂತೆ. ಲೋಕಸಭೆ ಚುನಾವಣೆಯಲ್ಲಿ ಇಂದಿರಾಗಾಂಧಿ ಪರ ಪ್ರಚಾರ ಮಾಡಲು ಯಾವ ವಿದೇಶ ಸಂಸ್ಥೆ ಮುಂದೆ ಬರುತ್ತದೆಂಬುದನ್ನು ಕಾದು ನೋಡಬೇಕಾಗಿದೆ.

ಎಂಥ ಪ್ರಭಾವಿ ಪ್ರಚಾರ-ಪ್ರಕ್ಷೋಭೆಯಾದರೂ ಕೂಡ ಭಾರತ ದೇಶದ ಮತದಾರರು ಸರ್ವಾಧಿಕಾರಿ ಇಂದಿರಾ ಗಾಂಧಿಯನ್ನು ಆಕೆಯ ಪಕ್ಷವನ್ನು ಪೂರ್ಣ ಸೋಲಿಸುತ್ತಾರೆಂಬ ಭರವಸೆ ನಮಗೆಲ್ಲರಿಗಿವೆ.

ಕುಣಿಗಲ್‌ನಲ್ಲಿ ಎಸ್. ಎಫ್. ಐ. ಘಟಕ

ಅಕ್ಟೋಬರ್ 8 ರಂದು ಕುಣಿಗಲ್ ಪ್ರಥಮ ದರ್ಜೆ ಕಾಲೇಜಿನ ವಿದ್ಯಾರ್ಥಿಗಳ ಎಸ್. ಎಫ್. ಐ. ಸಂಘಟನಾ ಸಮಿತಿಯನ್ನು ರಚಿಸಲಾಯಿತು. ಈ ಸಭೆಯ ಅಧ್ಯಕ್ಷತೆಯನ್ನು ಸಮುದಾಯದ ಯತಿರಾಜ್‌ರವರು ವಹಿಸಿದ್ದರು.

ಎಸ್. ಎಫ್. ಐ. ನ ಸಂಚಾಲಕರಾದ ಬಿ. ಸಿ. ಮೋಹನ್ ಕುಮಾರ್‌ರವರು ಡೊನೇಷನ್ ಮತ್ತು ಕ್ಯಾಪಿಟೇಷನ್‌ಫೀ ರದ್ದುಪಡಿಸಬೇಕೆಂದು ಒತ್ತಾಯಪಡಿಸಿದರು. ಮತ್ತು ಹಾಸ್ಟಲ್ ವಿದ್ಯಾರ್ಥಿಗಳ ಪ್ರಮುಖ ಬೇಡಿಕೆಗಳ ಬಗ್ಗೆ ಸಹಿ ಸಂಗ್ರಹ ಚಳುವಳಿ ನಡೆಸಬೇಕೆಂದು ಕರೆಯಿತ್ತರು. ಈ ಸಭೆಯಲ್ಲಿ ಕೆಳಕಂಡ ವಿದ್ಯಾರ್ಥಿ, ವಿದ್ಯಾರ್ಥಿನಿಯರ ಸಂಘಟನಾ ಸಮಿತಿಯನ್ನು ರಚಿಸಲಾಯಿತು. ಕಲ್ಪನಾ, ನಾಗಲತಾ, ಶೋಭ, ಯೋಗೇಂದ್ರಮೂರ್ತಿ, ಮಂಜುನಾಥ ಪ್ರಸಾದ್ ಟಿ.ವಿ., ಗಂಗ ಚಿಕ್ಕೆಗೌಡ ಮತ್ತು ಸಿದ್ದರಾಮೇಗೌಡ, ಮಂಜುನಾಥ ಪ್ರಸಾದ್ ರವರನ್ನು ಸರ್ವಾನುಮತದಿಂದ ಆರಿಸಲಾಯಿತು.

ಕನಸವಾಡಿಯಲ್ಲಿ

ದಿನಾಂಕ 11-9-84 ರಂದು ಬೆಂಗಳೂರು ಜಿಲ್ಲೆ ನೆಲಮಂಗಲ ತಾಲೋಕು ಕನಸವಾಡಿ ಸರ್ಕಾರಿ ಕಿರಿಯ ಕಾಲೇಜಿನ ಎಸ್. ಎಫ್. ಐ. ಘಟಕವನ್ನು ಉದ್ಘಾಟಿಸಲಾಯಿತು. ಈ ಸಭೆಗೆ ಬೆಂಗಳೂರು ಜಿಲ್ಲೆಯ ಎಸ್. ಎಫ್. ಐ. ಮತ್ತು ಡಿ. ವೈ. ಎಫ್. ಐ. ಮುಖಂಡರುಗಳಾದ ಕಾ|| ಚಂದ್ರ ತೇಜಸ್ವಿ, ಹನುಮಂತು, ರೇಣುಕಾರಾಧ್ಯ, ಜಯಶೇಖರ್ ಮತ್ತು ಸತ್ಯಕುಮಾರ್ ಹಾಜರಾಗಿದ್ದರು. ಸಭೆಯಲ್ಲಿ ಸುಮಾರು 70 ಮಂದಿ ವಿದ್ಯಾರ್ಥಿ ವಿದ್ಯಾರ್ಥಿನಿಯರು ಭಾಗವಹಿಸಿದ್ದರು. ಕೊನೆಯಲ್ಲಿ ಕಾಲೇಜಿನ ಘಟಕವನ್ನು ಸ್ಥಾಪಿಸಲಾಯಿತು. ಘಟಕದ ಸಂಚಾಲಕರಾಗಿ ಕಾ|| ಕರಣಿಕ ಸಂಗಪ್ಪ ಮತ್ತು ಮಂಜುನಾಥರವರನ್ನೂ ಆಯ್ಕೆ ಮಾಡಲಾಯಿತು.

ಕರ್ನಾಟಕದ ಪರಿಸ್ಥಿತಿಯ ಕುರಿತು.......

ಎಸ್. ಸೂರ್ಯನಾರಾಯಣ ರಾವ್ ಶಾಸಕರು ಮತ್ತು ಎನ್. ಕೆ. ಉಪಾಧ್ಯಾಯ ಕಾರ್ಯದರ್ಶಿ ಮಂಡಳಿ ಸದಸ್ಯರು ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷ ಕರ್ನಾಟಕ ರಾಜ್ಯ ಸಮಿತಿ ಇವರು ಅಕ್ಟೋಬರ್ 13 ರಂದು ನೀಡಿದ ಪತ್ರಿಕಾ ಹೇಳಿಕೆ :-

ಬರ ಪರಿಸ್ಥಿತಿ

ಕರ್ನಾಟಕದ 16 ಜಿಲ್ಲೆಗಳಲ್ಲಿ 15052 ಗ್ರಾಮಗಳಲ್ಲಿ ಮುಂಗಾರು ಬಿತ್ತನೆಯ ಸಮಯ ಮತ್ತು ಬೆಳೆಯ ಮುಖ್ಯ ಘಟ್ಟಗಳಲ್ಲಿ ಮಳೆ ಇಲ್ಲದ್ದರಿಂದ ತೀವ್ರ ಬರಗಾಲ ಪರಿಸ್ಥಿತಿ ಉಂಟಾಗಿ ಕರ್ನಾಟಕದ ರೈತಾಪಿ ಜನತೆ ತೊಂದರೆಗೊಳಗಾಗಿದೆ. ಕರ್ನಾಟಕದ ವಿವಿಧ ಭಾಗಗಳಲ್ಲಿ ಮುಖ್ಯವಾಗಿ ರಾಯಚೂರು, ಗುಲ್ಬರ್ಗ, ಬಿಜಾಪುರ ಜಿಲ್ಲೆಗಳಲ್ಲಿ ಪ್ರದರ್ಶನ ಪಿಕೆಟಿಂಗ್ ಕಾರ್ಯಕ್ರಮದ ಮೂಲಕ ಕರ್ನಾಟಕದ ಪ್ರಾಂತ ರೈತ ಸಂಘ ಬರಗಾಲ ಕಾಮಗಾರಿ ಕೆಲಸಗಳಿಗಾಗಿ ಕಾಮಗಾರಿಗಳು ಸುವ್ಯವಸ್ಥಿತವಾಗಿ ನಡೆಯಲು ಒತ್ತಾಯಿಸುತ್ತಿದೆ.

ಇತ್ತೀಚೆಗೆ ಮಳೆ ಬಂದು ಸ್ವಲ್ಪ ಅನುಕೂಲವಾಗಿದ್ದರೂ ಮುಂಗಾರು ಬೆಳೆ ಸಂಪೂರ್ಣ ನಾಶವಾಗಿರುವುದರಿಂದ ಬರಗಾಲದ ಪರಿಸ್ಥಿತಿ ತಗ್ಗಿದೆಯೆಂದು ಭಾವಿಸುವುದು ಬಾರಿ ತಪ್ಪಾದೀತು. ಮಳೆ ಇಲ್ಲದೆ ಬೆಳೆ ಹಾಳಾಗಿರುವ ಪ್ರದೇಶಗಳಲ್ಲೆಲ್ಲಾ ಕೃಷಿ ಕಾರ್ಮಿಕರು ಸಣ್ಣ ರೈತರು ಮುಂದಿನ ಬೆಳೆಯಾಗುವವರೆಗೂ ಕಷ್ಟವನ್ನೆದುರಿಸಬೇಕಾಗಿದೆ.

ಇತ್ತೀಚೆಗೆ ರಾಜ್ಯದಲ್ಲಿ ಪ್ರವಾಸ ಮಾಡಿದ ಕೇಂದ್ರ ಸರಕಾರದ ಅಧಿಕಾರಿಗಳ ತಂಡದ ಗಮನಕ್ಕೆ ಈ ಪರಿಸ್ಥಿತಿಯನ್ನು ಪಕ್ಷದ ಸಭೆಯಲ್ಲಿ ತಂದುದಲ್ಲದೆ ಕರ್ನಾಟಕ ಸರಕಾರ ತನ್ನ ಮೂರು ಮನವಿಗಳಲ್ಲಿ ವಿನಂತಿಸಿರುವ 209 ಕೋಟಿ ರೂಗಳನ್ನು ಕೇಂದ್ರವು ಸಹಾಯ ಧನವಾಗಿ ನೀಡಬೇಕೆಂದು ಒತ್ತಾಯಿಸಿತು. ಈ ಸಹಾಯ ಧನದಲ್ಲಿ ತಕ್ಷಣವೇ 50 ಕೋಟಿ ರೂಗಳನ್ನು ಬಿಡುಗಡೆ ಮಾಡಬೇಕೆಂದು ಕೇಂದ್ರ ಸರಕಾರವನ್ನು ಒತ್ತಾಯಿಸುತ್ತದೆ.

ರಾಜ್ಯ ಸರ್ಕಾರ ಬರ ಪರಿಸ್ಥಿತಿಯನ್ನು ಸಮರ್ಪಕವಾಗಿ ಎದುರಿಸಲು ಬರ ಪರಿಹಾರ ಕಾಮಗಾರಿಗಳಲ್ಲಿ ಹಣ ದುರುಪಯೋಗವಾಗದಂತೆ, ಅವ್ಯವಸ್ಥೆಯಾಗದಂತೆ ತಡೆಗಟ್ಟಲು ಉಸ್ತುವಾರಿ ಸಮಿತಿಗಳನ್ನು ರಚಿಸಬೇಕೆಂದು ಇದರಲ್ಲಿ ರೈತ ಸಂಘದ ಪ್ರತಿನಿಧಿಗಳಿಗೆ ಹೆಚ್ಚು ಪ್ರಾತಿನಿಧ್ಯ ನೀಡಬೇಕೆಂದು ಒತ್ತಾಯಿಸುತ್ತದೆ.

ಕೃಷಿ ಕಾರ್ಮಿಕರಿಗೆ ಕೆಲಸ ನೀಡಿದ ತಕ್ಷಣ ಪ್ರಯೋಜನವಾಗದು. ಆಹಾರ ಮತ್ತು ಇತರ ಅವಶ್ಯಕ ವಸ್ತುಗಳಬೆಲೆ ಏರದಂತೆ, ಕಾಳಸಂತೆ ಯಾಗದಂತೆ ತಡೆಗಟ್ಟಲು ಗ್ರಾಮಾಂತರ ಪ್ರದೇಶಗಳಲ್ಲಿ ಕೂಡ ಪಡಿತರ ಪದ್ಧತಿಯನ್ನು ತರಬೇಕು. ನಗರ ಮತ್ತು ಗ್ರಾಮಗಳೆಂಬ ಭೇದವಿಲ್ಲದೆ ಆಹಾರದ ಪ್ರಮಾಣವನ್ನು ನಿರ್ಧರಿಸಬೇಕು. ಪ್ರತಿ 2000 ಜನ ಸಂಖ್ಯೆಗೊಂದರಂತೆ ಮಾರಾಟ ಕೇಂದ್ರವನ್ನು ತೆರೆಯಬೇಕು ಎಂದು ಪಕ್ಷ ರಾಜ್ಯ ಸರ್ಕಾರವನ್ನು ಒತ್ತಾಯಿಸುತ್ತದೆ. ಇದಕ್ಕೆ ಅವಶ್ಯಕವಾದ ಆಹಾರ ವಸ್ತುಗಳನ್ನು ಸಬ್ಸಿಡಿ ದರದಲ್ಲಿ ಒದಗಿಸಬೇಕೆಂದು ಕೇಂದ್ರ ಸರ್ಕಾರವನ್ನು ಒತ್ತಾಯಿಸುತ್ತದೆ.

ಈಗ ನಡೆದಿರುವ ಕಟ್ಟಡ, ರಸ್ತೆ ಮೊದಲಾದ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಯೋಜನೆಯ ಕಾಮಗಾರಿಗಳನ್ನು ನಿಲ್ಲಿಸದೆ ಮುಂದುವರಿಸಬೇಕೆಂದು ಪಕ್ಷ ರಾಜ್ಯ ಸರಕಾರವನ್ನು ಒತ್ತಾಯಿಸುತ್ತದೆ. ರಾಜ್ಯ ಹೀಗೆ ಬರದ ಮಡಿಲಲ್ಲಿರುವಾಗ ರುದ್ರಪ್ಪನವರ ನೇತೃತ್ವದ ರಾಜ್ಯ ರೈತಸಂಘದ ನಾಯಕರು ಬರಗಾಲ ಬವಣೆಗಳಿಗೊಂದಕ್ಕೂ ಗಮನ ನೀಡದೆ ನಮ್ಮ ರಾಷ್ಟ್ರದ ಸ್ವಾತಂತ್ರ್ಯಕ್ಕಾಗಿ ಹೋರಾಡಿದ, ಸ್ವಾತಂತ್ರ್ಯದಿಂದ ಪಡೆದ ಪ್ರಜಾಪ್ರಭುತವನ್ನು ರಕ್ಷಿಸಲು ಹೋರಾಡುತ್ತಿರುವ ರಾಜಕೀಯ ಪಕ್ಷಗಳನ್ನು ಸಾರಸಗಟಾಗಿ ಧಿಕ್ಕರಿಸುವ ದಾರ್ಷ್ಟ್ಯದ ಮಾತುಗಳನ್ನಾಡಿದೆ. ಹತಾಶ ರಾಜಕಾರಣಿಗಳ ಈ ಕೂಗಾಟ ನಮ್ಮ ರಾಜ್ಯದ ರೈತರ ಐಕ್ಯ ಹೋರಾಟಕ್ಕೆ ಬಾಧಕವಾಗುತ್ತದೆ. ರೈತರ ಬೇಡಿಕೆಗಳ ಈಡೇರಿಕೆಗಾಗಿ ಎಲ್ಲಾ ರೈತ ಸಂಘಗಳ ಜೊತೆಗೂಡಿ ಐಕ್ಯ ಹೋರಾಟವನ್ನು ಕಟ್ಟುವುದರ ಬದಲು ಅದನ್ನು ಒಡೆಯುವ ಈ ತಂತ್ರ 37 ವರ್ಷಗಳ ನಿರಂತರ ಆಡಳಿತದ ಧೋರಣೆಗಳಲ್ಲಿ ಜನರಲ್ಲಿ ಅತೃಪ್ತಿ ಬೆಳೆಯುತ್ತಿರುವಾಗ ಅದನ್ನು ತಪ್ಪುದಾರಿಗೆ ತಿರುಗಿಸುವ ಪ್ರಯತ್ನದ ಮೂಲಕ ಅಪ್ರತ್ಯಕ್ಷವಾಗಿ ಕಾಂಗ್ರೆಸ್ [ಐ] ಪಕ್ಷಕ್ಕೆ ಸರ್ವ ಸಹಕಾರಿಯಾಗುತ್ತದೆ ಎಂಬುದನ್ನು ರೈತರಿಗೆ ಮನಗಾಣಿಸ ಬಯಸುತ್ತೇವೆ. ಇದೇ ಸಮಯದಲ್ಲಿ ರೈತ ಸಂಘದ ನ್ಯಾಯುತ ಬೇಡಿಕೆಗಳಿಗೆ ಬೆಂಬಲವನ್ನು ಸೂಚಿಸುತ್ತಾ ಆ ಬೇಡಿಕೆಗಳಿಗಾಗಿ ಐಕ್ಯ ಹೋರಾಟಕ್ಕೆ ಕರೆ ನೀಡುತ್ತೇವೆ. ರೈತರನ್ನು ದುಡಿಯುವ ನಗರ ಜನರ ಮೇಲೆ ಎತ್ತಿ ಕಟ್ಟುವುದು ಪ್ರಜಾಪ್ರಭುತ್ವ ಹೋರಾಟಕ್ಕೆ ಮಾರ್ಗವಾಗುತ್ತದೆ ಎಂಬ ಅರಿವು ಕೂಡ ಶೂನ್ಯವಾಗಿದೆ.

ಕೊಡಗಿನ ಮೂಲ ನಿವಾಸಿಗಳ ಸಂಘದ ಪ್ರತ್ಯೇಕವಾದ

ಏಕೀಕರಣದ ಸಮಯದಿಂದ ಕೊಡಗು ಪ್ರತ್ಯೇಕ ರಾಜ್ಯ ವಾಗುಳಿಯಬೇಕು ಎಂದು ಪ್ರತ್ಯೇಕವಾದವನ್ನು ಕೊಡಗಿನ ಜನತೆಯಲ್ಲಿ ಬಿತ್ತಿದ್ದ ಜನ ಈಗ ಕೊಡಗಿನ ಮೂಲನಿವಾಸಿಗಳ ಸಂಘವನ್ನು ಸ್ಥಾಪಿಸಿ "ಕೊಡಗು ಕೊಡಗರಿಗೆ" ಎಂಬ ಅಸ್ಸಾಂ ಮಾದರಿ ಪ್ರತ್ಯೇಕತೆಯನ್ನು ಬಿತ್ತುತ್ತಿದ್ದಾರೆ. ಕೊಡಗಿನ ಹೊರಗಿನಿಂದ ಬಂದ ಕನ್ನಡಿಗರು, ಕೇರಳೀಯರು, ತಮಿಳುನಾಡಿನವರ ವಿರುದ್ಧ ಧಾಳಿಯೆಸಗುತ್ತಿದ್ದಾರೆ. ಈ ಪ್ರವೃತ್ತಿಯನ್ನು ಈಗಲೇ ತಡೆಗಟ್ಟಬೇಕು ಇತ್ತೀಚೆಗೆ ತಿತಿಮತಿ, ದೇವರ ಪುರ ಪ್ರದೇಶದಲ್ಲಿ ಪ್ಲಾಂಟೇಶನ್ ಕಾರ್ಮಿಕರ ಮೇಲೆ ಧಾಳಿ ಮಾಡಿದ್ದಲ್ಲದೆ. ಗಾಯಗೊಂಡ ಕಾರ್ಮಿಕರಿಗೆ ಸಹಾಯ ಮಾಡಿದ ಕೊಡಗಿನವರನ್ನೂ ಕೊಲೆ ಮಾಡಲು ಪ್ರಯತ್ನಿಸಿದ್ದಾರೆ. ಈ ಬಗ್ಗೆ ಸರ್ಕಾರವು ತೀವ್ರ ಕ್ರಮ ಕೈಗೊಂಡು ತಪ್ಪಿತಸ್ಥರನ್ನು ಶಿಕ್ಷಿಸಬೇಕು ಮತ್ತು ಈ ಅಪಾಯಕಾರಿ ಪ್ರತ್ಯೇಕತಾ ಚಟುವಟಿಕೆಗಳನ್ನು ತಡೆಗಟ್ಟಬೇಕು.

ಲೋಕಸಭಾ ಚುನಾವಣೆಗಳು

ಈ ಲೋಕಸಭಾ ಚುನಾವಣೆಗಳಲ್ಲಿ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷ

1] ಸರ್ವಾಧಿಕಾರಿ ಕಾಂಗ್ರೆಸ್ [ಐ] ಪಕ್ಷವನ್ನು ಸೋಲಿಸಲು,

2] ಜಾತೀಯ ಮತೀಯ ಶಕ್ತಿಗಳನ್ನು ಹಿಮ್ಮೆಟ್ಟಿಸಲು,

3] ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳನ್ನು ಬೆಳೆಸಲು ಶ್ರಮಿಸುತ್ತದೆ. ಮುಂಬರುವ ಲೋಕಸಭಾ ಚುನಾವಣೆಗಳಲ್ಲಿ ಹೊಂದಾಣಿಕೆ ಮಾತುಕತೆಗಾಗಿ ತಮ್ಮ ಪಕ್ಷ ಜನತಾ ಪಕ್ಷಕ್ಕೆ ಪತ್ರ ಬರೆದಿದೆ. ಆದರೆ ಇದುವರೆಗೂ ಬಿ..ಜೆ.ಪಿ ಯವರ ಜೊತೆಯಲ್ಲಿ ಚರ್ಚಿಸುತ್ತಿರುವುದಲ್ಲದೆ ನಮಗೆ ಉತ್ತರ ಬಂದಿಲ್ಲ.ಮುಖ್ಯಮಂತ್ರಿಗಳು ತಮ್ಮ ಆರೋಗ್ಯ ಸುಧಾರಿಸಲು ಪ್ರವಾಸ ಹೋಗುವ ಮೊದಲು ಸಿ. ಪಿ. ಐ. ಮತ್ತು ಸಿ. ಪಿ. ಐ. [ಎಂ] ಗಳೆರಡರ ಜೊತೆಯಲ್ಲಿಯೂ ಚರ್ಚಿಸಬೇಕೆಂದು ಪಕ್ಷದ ರಾಜ್ಯಘಟಕ ಒತ್ತಾಯಿಸುತ್ತದೆ. ಈ ಮೂಲಕ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷವನ್ನು ರಾಜ್ಯದಲ್ಲಿ ಸೋಲಿಸಲು ಸಾಧ್ಯವಾಗುತ್ತದೆ. ಇತ್ತೀಚೆಗೆ ದಾವಣಗೆರೆಯಲ್ಲಿ ಜನತಾ ಶಿಕ್ಷಣ ಸಚಿವ ಶ್ರೀ ಎಂ. ರಘುಪತಿಯವರು ಮತ್ತು ಪಕ್ಷದ ಮಹಾ ಕಾರ್ಯದರ್ಶಿ ಶ್ರೀ ಜೆ. ಹೆಚ್. ಪಾಟೀಲರು ಉದ್ಯೋಗದಲ್ಲಿ ಮತ್ತು ಶಿಕ್ಷಣದಲ್ಲಿ ಹಿಂದುಳಿಕೆಯನ್ನು ಗುರುತಿಸುವುದಕ್ಕೆ ಜಾತಿ ಒಂದೇ ಆಧಾರವಾಗಿರಬೇಕು ಎಂದು ಪ್ರತಿಪಾದಿಸಿದ್ದಾರೆ. ಇದು ಈಗ ಜಾರಿಯಲ್ಲಿರುವ ಜಾತಿಯ ಜೊತೆಗೆ ಆರ್ಥಿಕ ಹಿಂದುಳಿಯುವಿಕೆಯನ್ನು ಪರಿಗಣಿಸುವ ನೀತಿಗೆ ವಿರೋಧವಾಗಿದೆ. ಈಗ ಈ ಜನತಾ ನಾಯಕರು ವ್ಯಕ್ತಪಡಿಸಿರುವ ಅಭಿಪ್ರಾಯ ಜನತಾ ಪಕ್ಷದ ಮತ್ತು ಸರಕಾರದ ಅಧಿಕೃತ ನಿಲುವಾಗಿದೆಯೆ ಮತ್ತು ಸರಕಾರದ ನೀತಿಗಳಲ್ಲಿ ಬದಲಾವಣೆಯನ್ನು ಯೋಚಿಸಲಾಗುತ್ತಿದೆಯೇ ಎಂಬ ಬಗ್ಗೆ ಸ್ಪಷ್ಟೀಕರಣವನ್ನು ಬಯಸುತ್ತೇವೆ.

ಸಿಐಟಿಯು ಬೆಂಬಲಿತ ಕಾರ್ಮಿಕ ಸಂಘಟನೆಗೆ ಜಯ

ಕೋಲಾರದ ಚಿನ್ನದ ಗಣಿ ಪ್ರದೇಶದಲ್ಲಿರುವ ಕೇಂದ್ರ ಸರಕಾರದ ಬಿ.ಇ.ಎಂ.ಎಲ್. ಕಾರ್ಖಾನೆಯಲ್ಲಿ, ಸುಮಾರು ಏಳು ಸಾವಿರ [7000] ಕಾರ್ಮಿಕರು ಕೆಲಸ ಮಾಡುತ್ತಿದ್ದು ಕೇಂದ್ರ ಸರ್ಕಾರಕ್ಕೆ ಅಧಿಕವಾಗಿ ಲಾಭ ತರುವಂತವುದಾಗಿದೆ. ಈ ಕಾರ್ಖಾನೆಯಲ್ಲಿ ಎರಡು ವರ್ಷಕ್ಕೆ ಒಂದು ಸಲ ಚುನಾವಣೆ ನಡೆಯುತ್ತದೆ. ಕಳೆದ ತಿಂಗಳು 29-9-84 ರಂದು ನಡೆದ ಭಾರತ್ ಅರ್ತ್ ಮೂವರ್ಸ್ ಎಂಪ್ಲಾಯಿಸ್ ಅಸೋಸಿಯೇಶನ್ [ಬಿ.ಇ.ಎಂಇ.ಎ.] ಕಾರ್ಮಿಕ ಸಂಘದ ಚುನಾವಣೆಯಲ್ಲಿ [ಸಿ.ಡಬ್ಲ್ಯು.ಸಿ.] ಸೆಂಟರ್ ಆಫ್ ವರ್ಕಿಂಗ್ ಕ್ಲಾಸ್‌ನ ಸಂಘಟನೆಯ ಸಿ.ಐ.ಟಿ.ಯು. ಬೆಂಬಲಿಗ ಸಂಗಾತಿಗಳು ಅಧಿಕ ಬಹುಮತಗಳಿಂದ ಆರಿಸಿ ಬಂದಿದ್ದಾರೆ. ಇದಕ್ಕೆ ಮೊದಲು ಇದ್ದ ಕಾರ್ಮಿಕ ಸಂಘದ ಅಧ್ಯಕ್ಷರಾದ ಜಿ. ವೇಣುಗೋಪಾಲ್ ರವರು, ಅಲ್ಪ ಮತಗಳನ್ನು ಪಡೆದು ಸೋತಿರುತ್ತಾರೆ.

ಇದಕ್ಕೂ ಮೊದಲು ಕಾರ್ಮಿಕ ಸಂಘದಲ್ಲಿ ಎರಡು ಸಾರಿ ಅಧ್ಯಕ್ಷರಾಗಿ ಆರಿಸಿ ಬಂದಿದ್ದ ಎಂ. ಎ. ಸುಬ್ರಮಣಿ ಅವರನ್ನು ಸೋಲಿಸಿ ಟಿ. ಎಸ್. ಅಶ್ವಥ ನಾರಾಯಣರವರು ಬಹುಮತದಿಂದ ಅಧ್ಯಕ್ಷರಾಗಿ ಆರಿಸಿ ಬಂದಿರುತ್ತಾರೆ. ಉಪಾಧ್ಯಕ್ಷರಾಗಿ ಡಿ. ಕೆ. ಅನುರಾಧ ಮೂರ್ತಿ, ಪ್ರಧಾನಕಾರ್ಯದರ್ಶಿಗಳಾಗಿ, ಆರ್. ರಾಂಮೋಹನ್, ಸಹ ಕಾರ್ಯದರ್ಶಿಗಳಾಗಿ ಎಂ. ಕುಪ್ಪಸ್ವಾಮಿ, ಮತ್ತು ಟಿ. ವಿ. ರಾಮಚಂದ್ರನ್, ಖಜಾಂಚಿಯಾಗಿ ಕೆ. ತಾರಾನಾಥ ರವರು ಆರಿಸಿ ಬಂದಿರುತ್ತಾರೆ.

ಕಾರ್ಯಕಾರಿ ಸಮಿತಿಯ ಸದಸ್ಯರಾಗಿ ಲೂಯಿಸ್ ತರಗನ್, ಟಿ. ಆರ್. ನಾಗರಾಜ್, ಎಂ. ವಿಜಯಕುಮಾರ್, ಕೆ. ಓ. ರಾಮಸ್ವಾಮಿ, ಐ. ತಂಗರಾಜ್, ಕೆ. ಭಾಸ್ಕರನ್, ಅಂತೋನಿ ಪಿಂಟೋ, ಸತ್ಯಶೀಲನ್, ಸೋಮಶೇಖರ್, ಮತ್ತು ಪಿ. ಶ್ರೀನಿವಾಸ್, ಇವರುಗಳು ಆರಿಸಿ ಬಂದಿರುತ್ತಾರೆ. ಈ ಚುನಾವಣೆ ಕಾರ್ಮಿಕ ಕೇಂದ್ರವಾದ ಕೋಲಾರದ ಚಿನ್ನದಗಣಿ ಪ್ರದೇಶದಲ್ಲಿ ಕಾರ್ಮಿಕರ ಮೇಲೆ ಒಳ್ಳೆ ಪರಿಣಾಮ ಬೀರಿದೆ.

ಕೊಡಗು ಜನರ ಸಮಸ್ಯೆ

ಕೊಡಗಿನಲ್ಲಿಅಸ್ಸಾಂ ತರ ಛಿದ್ರಕಾರಿ ಶಕ್ತಿಗಳ ಅತ್ಯಾಚಾರ ನಡೆದಿದೆ. ಕೊಡಗು ಕೊಡಗರಿಗೇ ಮಾತ್ರ ಎಂಬ ಘೋಷಣೆಯೊಂದಿಗೆ ಕೆಲವು ಜನ ಕೊಡಗಿನಲ್ಲೇ ಹುಟ್ಟಿ, ಬೆಳೆದು,ಹೊಲ, ಉದ್ಯೋಗ, ನೌಕರಿ ಮಾಡುತ್ತಿರುವ ಕೇರಳ, ತಮಿಳುನಾಡು ಮತ್ತಿತರ ಭಾಷಿಕರ ಮೇಲೆ ದಬ್ಬಾಳಿಕೆ ನಡೆಸಿದ್ದಾರೆ. ಈ ದಬ್ಬಾಳಿಕೆಯನ್ನು ವಿರೋಧಿಸಿ ಕೇರಳ, ತಮಿಳರಿಗೆಲ್ಲ ಬೆಂಬಲ ನೀಡುವ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಾರ್ಟಿ ಕಾರ್ಯಕರ್ತರ ಮೇಲೆ ಕೂಡ ಅತ್ಯಾಚಾರ ನಡೆಸಿದ್ದಾರೆ. ಇಂಥ ದೇಶದ್ರೋಹಿ, ಛಿದ್ರಕಾರಿ ಶಕ್ತಿಗಳ ಮೇಲೆ ಯೋಗ್ಯ ಕ್ರಮ ತೆಗೆದುಕೊಂಡು, ಕೇರಳ, ತಮಿಳರಿಗೆಲ್ಲ ರಕ್ಷಣೆ ನೀಡಬೇಕೆಂದೂ, ಜನರು ಎದುರಿಸುತ್ತಿರುವ ಇತರ ಸಮಸ್ಯೆಗಳನ್ನು ಬಗೆಹರಿಸಬೇಕೆಂದೂ ಸಿ. ಪಿ. ಐ. [ಎಂ] ನ ಗೋಣಿಕೊಪ್ಪಲ ಶಾಖೆ ರಾಜ್ಯದ ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆಯವರು 26-9-84 ರಂದು ಕೊಡಗು ಜಿಲ್ಲೆಗೆ ಬಂದಾಗ ಮನವಿಮೂಲಕ ಕೇಳಿಕೊಂಡಿದ್ದಾರೆ. ಈ ಸಮಸ್ಯೆ ಬಗೆಹರಿಸಲು ಸರಕಾರ ಹಿಂಜರಿದದ್ದಾದರೆ, ಸಿ. ಪಿ. ಐ. [ಎಂ] ಉಗ್ರ ಚಳುವಳಿ ಮಾಡಬೇಕಾದೀತೆಂದೂ ತಿಳಿಸಿದ್ದಾರೆ. ಕೊಡಗು ಪಾರ್ಟಿ ಮತ್ತು ಪ್ರಜಾಪ್ರಭುತ್ವ ಶಕ್ತಿಗಳ ಮೇಲೆ ಗುರುತರವಾದ ಜವಾಬ್ದಾರಿ ಇದೆ. ಛಿದ್ರಕಾರಿ ಶಕ್ತಿಗಳ ವಿರುದ್ಧ ಸತತ ಹೋರಾಟ ಮುನ್ನಡೆಯಲಿ.

ಶೇ 40 ರಷ್ಟು ಬೋನಸ್ಸಿಗಾಗಿ ಹೋರಾಟ

ಭಾರತೀನಗರದಲ್ಲಿರುವ ಶ್ರೀ ಚಾಮುಂಡೇಶ್ವರಿ ಸಕ್ಕರೆ ಕಾರ್ಖಾನೆಯವರು ಹೋದ ವರ್ಷ ಶೇ 40 ರಷ್ಟು ಬೋನಸ್ಸನ್ನು ದೀಪಾವಳಿಯ ಮುಂಚಿತವಾಗಿ ವಿತರಣೆ ಮಾಡಿದ್ದರು. ಈ ವರ್ಷ ಕೂಡ ದೀಪಾವಳಿಯೊಳಗಾಗಿಯೇ ಬೋನಸ್ ಕೊಡಬೇಕೆಂದು ಎಂಪ್ಲಾಯೀಸ್ ಅಸೋಸಿಯೇಶನ್ನಿನವರು ಮಾಲಕ ವರ್ಗಕ್ಕೆ ಎರಡು ಸಲ ಪತ್ರ ಮುಖೇನ ತಿಳಿಸಿದರೂ ಕೂಡ ಅವರು ಬೇಡಿಕೆಯನ್ನು ಮಂಜೂರಿ ಮಾಡಲು ನಿರಾಕರಿಸುತ್ತಿರುವುದರಿಂದ ತಾ. 15 ರಂದು ವೈ. ಸಿದ್ದಲಿಂಗ ಸ್ವಾಮಿ ಯವರ ಅಧ್ಯಕ್ಷತೆಯಲ್ಲಿ ಕಾರ್ಯಕಾರೀ ಸಮಿತಿ ಸಭೆ ಸೇರಿ ಬೋನಸ್ ಹಬ್ಬದೊಳಗಾಗಿ ವಿತರಣೆಯಾಗದಿದ್ದರೆ 2-11-84 ರಿಂದ ಮುಷ್ಕರ ಹೂಡಬೇಕೆಂದೂ, ಅಲ್ಲಿವರೆಗೆ ಕಪ್ಪುಬ್ಯಾಡ್ಜ ಧರಿಸಿ ಕೆಲಸಕ್ಕೆ ಹೋಗಬೇಕೆಂದೂ, ರೈತರಲ್ಲೂ, ಸಾರ್ವಜನಿಕರಲ್ಲೂ ಕಂಪನಿಯ ಅನ್ಯಾಯವನ್ನು ಬಯಲಿಗೆಳೆಯಬೇಕೆಂದೂ ನಿರ್ಧರಿಸಲಾಯಿತು. ಸಂಘದ ಸಲಹೆಗಾರರಾದ ಎಂ. ಎನ್. ಉಗ್ರಪ್ಪನವರು ಮಾರ್ಗದರ್ಶನ ಮಾಡಿದರು. ಕೆಲಸಗಾರರೆಲ್ಲ ಒಗ್ಗಟ್ಟಾಗಿ ಉತ್ಸಾಹದಿಂದ ಹೋರಾಟದ ಸಿದ್ಧತೆ ನಡೆಸಿದ್ದಾರೆ. ವಿಜಯಗಳಿಸುವ ದೃಢ ನಿರ್ಧಾರದಲ್ಲಿದ್ದಾರೆ.

ಕೇರಳದಲ್ಲಿ ಪಂಚಾಯತ್ ಚುನಾವಣೆ ನಡೆಸಲು ಕಾಂಗ್ರೆ ಹಿಂದೇಟು

ಇದೇ ವರ್ಷ ಸೆಪ್ಟಂಬರ್ 30 ಕ್ಕೆ ಕೇರಳದ ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳ ಅವಧಿ ಮುಗಿದಿದೆ. ಕೇರಳದ ಕಾಂಗ್ರೆ ಸರಕಾರ ಆ ಅವಧಿಯ ಮುಂಚಿತವಾಗಿಯೇ ಚುನಾವಣೆ ನಡೆಸಿ ಪ್ರಜಾಪ್ರಭುತ್ವದ ಪರಂಪರೆಯನ್ನು ಉಳಿಸಿಕೊಳ್ಳಬೇಕಾಗಿತ್ತು. ಆದರೆ ಯಾವಾಗಲೂ ಮತದಾರರಿಗೆ ಅಂಜುವ, ಪ್ರಜಾಪ್ರಭುತ್ವವನ್ನು ಕೊಲೆ ಮಾಡುವ ಇಂದಿರಾ ಕಾಂಗ್ರೆಸ್‌ನ ಕರುಣಾಕರನ್ ಸರಕಾರ ಕೇರಳದಲ್ಲಿ ನಗರಸಭೆ-ಪಂಚಾಯಿತಿಗಳಿಗೆ ಚುನಾವಣೆ ನಡೆಸಲಿಲ್ಲ. ಇದಕ್ಕೆ ಕಾರಣವೇನು ?

ಈ ಹಿಂದೆ ಕೂಡ ಕಾಂಗ್ರೆ ಅಧಿಕಾರದಲ್ಲಿದ್ದ ರಾಜ್ಯಗಳಲ್ಲಿ ಸ್ಥಾನಿಕ ಸಂಸ್ಥೆಗಳಿಗೆ ಚುನಾವಣೆ ನಡೆಯದೆ, ಅವುಗಳೆಲ್ಲ ಸರಕಾರಿ ಅಧಿಕಾರಿಗಳ ಅಧೀನದಲ್ಲಿದ್ದವು. ಪಶ್ಚಿಮ ಬಂಗಾಲ, ತ್ರಿಪುರ ಕೇರಳಗಳಲ್ಲಿ ಸಿ. ಪಿ. ಐ (ಎಂ) ಮುಖಂಡತ್ವದ ಎಡರಂಗ ಸರಕಾರ ಅಧಿಕಾರಕ್ಕೆ ಬಂದ ಕೂಡಲೇ ಆ ಚುನಾವಣೆಗಳನ್ನು ನಡೆಸಿ ಚುನಾಯಿತ ಪ್ರತಿನಿಧಿಗಳಿಗೆ ಅಧಿಕಾರ ಒಪ್ಪಿಸಲಾಯಿತು.

ಕೇರಳದಲ್ಲಿ ಈ ಹಿಂದೆ ನಡೆದ ಚುನಾವಣೆಯಲ್ಲಿ ಸಿ ಪಿ. ಐ (ಎಂ) ಮುಖಂಡತ್ವದ ಎಡ ಪ್ರಜಾಪ್ರಭುತ್ವ ರಂಗ ಬಹುತೇಕ ಸ್ಥಳೀಯ ಸಂಸ್ಥೆಗಳಲ್ಲಿ ಬಹುಮತ ಪಡೆದಿತ್ತು. ಕಾಂಗ್ರೆಯ ಸಂಯುಕ್ತರಂಗ ಅಲ್ಪಮತದಲ್ಲಿತ್ತು. ಕಳೆದ 5 ವರ್ಷಗಳಲ್ಲಿ ತಾನು ಅಧಿಕಾರದಲ್ಲಿದ್ದಾಗ ಎಡ ರಂಗದವರು ತಮ್ಮ ಉತ್ತಮ ಆಡಳಿತೆಯಿಂದ ಜನಾದರಗಳಿಸಿದ್ದಾರೆ. ಆದ್ದರಿಂದ ಈಗ ಮತ್ತೆ ಚುನಾವಣೆಯಾದರೆ ತಾವು ಸಂಪೂರ್ಣ ಸೋಲುತ್ತೇವೆಂಬ ಭೀತಿ ಕಾಂಗ್ರೆ ಮತ್ತು ಅವರ ಸಂಗಾತಿಗಳನ್ನಾವರಿಸಿದೆ. ಹಾಗಾದ್ದಲ್ಲಿ ಮುಂಬರುವ ಲೋಕಸಭೆಯ ಚುನಾವಣೆಯಲ್ಲಿ ಕಾಂಗ್ರೆ ಮತ್ತು ಅವರ ಗೆಳೆಯ ಪಕ್ಷಗಳ ಮೇಲೆ ಅತಿ ಕೆಟ್ಟ ಪರಿಣಾಮ ಉಂಟಾಗುತ್ತದೆ.

ಅಷ್ಟೇ ಅಲ್ಲ ಸದ್ಯ ಕೇರಳದ ಕಾಂಗ್ರೆ ಮುಖಂಡತ್ವದ ಸಂಯುಕ್ತರಂಗ ಒಳಜಗಳಗಳಿಂದ ಪೀಡಿತವಾಗಿದೆ. ಕೇರಳದ ಇಂಡಿಯನ್ ಯೂನಿಯನ್ ಮುಸ್ಲಿಂಲೀಗ್ ಭೀಕರ ಬಿಕ್ಕಟ್ಟಿನಲ್ಲಿದೆ. ಮುಸ್ಲಿಂ ಲೀಗಿನ ಯುವಕರಲ್ಲಿ ನಿರಾಶೆ ಉಂಟಾಗಿದೆ. ಕೇರಳ ಬಿಟ್ಟು ಇತರ ರಾಜ್ಯಗಳಲ್ಲಿ ನಾವು ವಿರೋಧ ಪಕ್ಷಗಳ ಜೊತೆಯಲ್ಲಿದ್ದೇವೆ. ಕಾಂಗ್ರೆಸ್ ನಮ್ಮ ವಿಷಯದಲ್ಲಿ ದ್ವಿಮುಖ ಧೋರಣೆ ಅನುಸರಿಸುತ್ತಿದೆ. ಎಂದು ಮುಸ್ಲಿಂಲೀಗ್ ಅಧ್ಯಕ್ಷರಾದ ಸುಲೇಮಾನ್‌ಸೇಠ್ ಅವರು ಪತ್ರಿಕೆಗಳಿಗೆ ಹೇಳಿಕೆ ನೀಡಿದ್ದಾರೆ. ಕಾಂಗ್ರೆ ರಂಗದಿಂದ ಮುಸ್ಲಿಂಲೀಗ್ ಹೊರಬರಬಹುದೆಂಬ ಸುದ್ದಿ ಹಬ್ಬಿದೆ.

ಇಂಥ ಪರಿಸ್ಥಿತಿಯಲ್ಲಿ ಸ್ಥಳೀಯ ಸಂಸ್ಥೆಗಳ ಚುನಾವಣೆ ತಮಗೆ ಗಂಡಾಂತರಕಾರಿ ಎಂದು ತಿಳಿದ ಕರುಣಾಕರನ್ ಸರಕಾರ. ಆ ಸಂಸ್ಥೆಗಳ ಅಧಿಕಾರವನ್ನು ಮುಂದುವರಿಸದೆ, ಅವುಗಳನ್ನು ರದ್ದು ಮಾಡಿ, ಚುನಾವಣೆ ಮುಂದೂಡಿದೆ.

ಚುನಾಯಿತ ಸ್ಥಳೀಯ ಸಂಸ್ಥೆಗಳನ್ನು ಹೊಂದುವ ನಾಗರೀಕರ ಹಕ್ಕಿಗೆ ಇದು ಗಧಾಪ್ರಹಾರ ಮಾಡಿದಂತಾಗಿದೆ. ಸಿ. ಪಿ. ಐ (ಎಂ) ಮತ್ತು ಎಡ ಪ್ರಜಾಪ್ರಭುತ್ವ ಪಕ್ಷಗಳು ಸರಕಾರದ ಈ ನೀತಿಯ ವಿರುದ್ಧ ಪ್ರತಿಭಟನೆ ನಡೆಸುತ್ತಿವೆ. ಕಾಂಗ್ರೆ ಸರಕಾರದ ಈ ನೀತಿ ಖಂಡನೀಯ.

○

ತುಮಕೂರು

ರೈತ ಸಂಘದಿಂದ ಮನವಿ

ಸ್ಥಳೀಯ ಸಂಸ್ಥೆಗಳ ಆರ್ಥಿಕ ಪರಿಸ್ಥಿತಿ ಪರಿಶೀಲನಾ ಸಮಿತಿಯವರು ದಿ. 16-10-84 ರಂದು ಜಿಲ್ಲಾಧಿಕಾರಿಗಳ ಕಛೇರಿಯ ಆವರಣದಲ್ಲಿ ಸಭೆ ಸೇರಿದ್ದಾಗ ಜಿಲ್ಲಾ ರೈತ ಸಂಘದ ಪರವಾಗಿ ಶ್ರಿಯುತರುಗಳಾದ ಟಿ. ಕೆ. ಗೋವಿಂದರಾಜು, ಹೆಚ್. ಸಿ. ಚೆನ್ನಪ್ಪ ಆರ್. ರವೀಂದ್ರನಾಯಕ್ ರವರು ಭೇಟಿ ಮಾಡಿ ಕೃಷಿ ಹಣಕಾಸು ಸಮಸ್ಯೆಗಳ ಬಗ್ಗೆ ಚರ್ಚೆ ನಡೆಸಿ ಈ ಕೆಳಕಂಡ ಬೇಡಿಕೆಗಳನ್ನು ಈಡೇರಿಸಬೇಕೆಂಬ ಮನವಿ ಪತ್ರವನ್ನು ಅರ್ಪಿಸಿದರು.

1. ಸ್ಥಳೀಯ ಸಂಸ್ಥೆಗಳ ಪ್ರದೇಶದ ರೇವಿನ್ಯೂ ಕಂದಾಯವನ್ನು ಪೂರ್ತಿಯಾಗಿ ಅವುಗಳಿಗೆ ಕೊಡಬೇಕು.

2. ಆಯಾ ಪ್ರದೇಶದ ಕೆರೆ ಕಟ್ಟೆಗಳ ಮೀನು ಉತ್ಪತ್ತಿ ಆಯಾ ಸಂಸ್ಥೆಗಳಿಗೆ ಸೇರುವಂತೆ ಕಡ್ಡಾಯಗೊಳಿಸಬೇಕು.

3. ಇಟ್ಟಿಗೆ, ಕಲ್ಲು, ಮರಳು ಇವುಗಳ ಮೇಲಿನ ತೆರಿಗೆ ಅಲ್ಲಿಯ ಸಂಸ್ಥೆಗಳಿಗೆ ಕೊಡಬೇಕು.

4. ಸಿನಿಮಾ ಮುಂತಾದವುಗಳ ಮನರಂಜನಾ ತೆರಿಗೆಗಳ ಪೂರ್ತಿ ಭಾಗವನ್ನು ಕೊಡಬೇಕು.

5. ಎಂ. ವಿ. ಆ್ಯಕ್ಟ್‌ನಡಿ ಬರುವ ಬಸ್, ಲಾರಿ, ಟ್ರಾಕ್ಟರ್, ಮೊಪೆಡ್ ವಗೈರೆ ತೆರಿಗೆಗಳಲ್ಲಿ ಶೇ. 25 ಕೊಡಬೇಕು.

6. ನೀರು ಸರಬರಾಜಿನ ಪೂರ್ಣ ವ್ಯವಸ್ಥೆ ಸರಕಾರವೇ ವಹಿಸಿಕೊಳ್ಳಬೇಕು.

7. ಆಯಾ ಸಂಸ್ಥೆಗಳ ಬಾಕಿ ತೆರಿಗೆಗಳನ್ನು ಕಡ್ಡಾಯವಾಗಿ ವಸೂಲು ಮಾಡಬೇಕು.

8. ಬಾಡಿಗೆ ಬರುವಂತಹ ಕಟ್ಟಡಗಳನ್ನು ಹೆಚ್ಚು ಹೆಚ್ಚು ಕಟ್ಟಲು ಪ್ರೋತ್ಸಾಹಿಸಬೇಕು.

○

ಆಟೋರಿಕ್ಷಾ ಚಾಲಕರ ಪ್ರಥಮ ರಾಜ್ಯ ಸಮಾವೇಶ

ದಿನಾಂಕ 5-10-84 ರಂದು ಮಂಗಳೂರಿನಲ್ಲಿರುವ ಡಾನ್ ಬೋಸ್ಕೋ ಹಾಲಿನಲ್ಲಿ ಕರ್ನಾಟಕ ರಾಜ್ಯ ಆಟೋರಿಕ್ಷಾ ಚಾಲಕರ ಸಮಾವೇಶವು ದ. ಕ. ಜಿಲ್ಲಾ ಆಟೋರಿಕ್ಷಾ ಚಾಲಕರ ಸಂಘದ ಅಧ್ಯಕ್ಷ ಹಾಗೂ ವಿಧಾನ ಸಭಾ ಸದಸ್ಯರಾದ ಕಾ. ಪಿ. ರಾಮಚಂದ್ರರಾವ್ ರವರ ಅಧ್ಯಕ್ಷತೆಯಲ್ಲಿ ನಡೆಯಿತು. ರಾಜ್ಯದ ಹತ್ತು ಜಿಲ್ಲೆಗಳಿಂದ 310 ಪ್ರತಿನಿಧಿಗಳು ಈ ಸಮಾವೇಶದಲ್ಲಿ ಭಾಗವಹಿಸಿ ಆಟೋರಿಕ್ಷಾ ಚಾಲಕರು ನಿತ್ಯ ಜೀವನದಲ್ಲಿ ಅನುಭವಿಸುತ್ತಿರುವ ಸಮಸ್ಯೆಗಳನ್ನು ಕುರಿತು ಚರ್ಚಿಸಿದರು.

1. ಆಟೋರಿಕ್ಷಾ ಚಾಲ್ತಿಯಲ್ಲಿ ಇರದೇ ಇದ್ದ ಕಾಲವಾದ 1939 ರಲ್ಲಿ ಬ್ರಿಟಿಷರು ರಚಿಸಿರುವ ಮೋಟಾರ್ ವಾಹನ ಕಾಯಿದೆಯನ್ನು ಬದಲಾಯಿಸಬೇಕು.

2. ಕರ್ನಾಟಕ ಸರ್ಕಾರ ಚಾಲಕರಿಗೆ ದಂಡ ವಿಧಿಸಲು ಪೋಲೀಸ್ ಅಧಿಕಾರಿಗಳಿಗೆ ಕೊಟ್ಟಿರುವ ಅಧಿಕಾರವನ್ನು ವಾಪಸ್ ಪಡೆಯಬೇಕು.

3. ಸ್ವತಃ ಆಟೋ ಚಾಲನೆ ಮಾಡುವವರಿಗೆ ಅಟೋ ಚಾಲಕರಿಗೆ ಮಾತ್ರ ಪರ್ಮಿಟ್‌ಗಳನ್ನು ನೀಡಿ, ಸರ್ಕಾರವೇ ಕಡಿಮೆ ಬಡ್ಡಿ ದರದಲ್ಲಿ ಹಣವನ್ನು ಸಾಲ ಕೊಡಬೇಕು.

4. ಬೇರೆ ಬೇರೆ ಉದ್ಯೋಗಸ್ಥರಿಗೆ ನೀಡಿರುವ ಪರ್ಮಿಟ್‌ಗಳನ್ನು ಕೂಡಲೇ ಮುಟ್ಟುಗೋಲು ಹಾಕಿ ಅವುಗಳನ್ನು ಚಾಲಕರಿಗೆ ಕೊಡಬೇಕು.

5. ಅಪಘಾತ ಪರಿಹಾರ ಧನವನ್ನು ಸರ್ಕಾರ ಆಟೋಚಾಲಕರಿಗೆ ಕೊಡಬೇಕು.

6. ವಸತಿ ಗೃಹಗಳನ್ನು ನಿರ್ಮಿಸಿ ಒದಗಿಸಬೇಕು.

7. ಕಾರ್ಮಿಕ ವರ್ಗಕ್ಕೆ ಸಿಗುತ್ತಿರುವ ಸೌಲಭ್ಯಗಳು ಆಟೋ ಚಾಲಕರಿಗೆ ಸಿಗಬೇಕು.

8. ಆಟೋ ಪ್ರಯಾಣದರ ನಿಗಧಿ ಮಾಡುವ ಅಧಿಕಾರವನ್ನು ಸ್ಥಳೀಯ ಆರ್. ಟಿ. ಒ, ಸಾರ್ವಜನಿಕರು ಮತ್ತು ಸಂಘದವರಿಗೆ ನಿರ್ಧರಿಸುವ ಅಧಿಕಾರವನ್ನು ಕೊಡಬೇಕು.

9. ಆಟೋದವರಿಂದ ನಗರ ಪಾಲಿಕೆಯವರು ವಸೂಲಿ ಮಾಡುವ ಎಲ್ಲಾ ತರಹದ ಶುಲ್ಕವನ್ನು ರದ್ದು ಮಾಡಬೇಕು.

ಮತ್ತು ಇತರ 3 ಬೇಡಿಕೆಗಳನ್ನೊಳಗೊಂಡ 12 ಬೇಡಿಕೆಗಳ ಪಟ್ಟಿಯನ್ನು ಸರಕಾರಕ್ಕೆ ಕೊಟ್ಟು ಜಾರಿಗಾಗಿ ಒತ್ತಾಯಿಸಲು ಒಂದು ದಿನದ ಸಾಂಕೇತಿಕ ಮುಷ್ಕರಕ್ಕೆ ಇಡೀ ರಾಜ್ಯದ ಆಟೋ ಚಾಲಕರಿಗೆ ಕರೆ ನೀಡಲಾಯಿತು. ಮುಷ್ಕರದ ದಿನವನ್ನು ಈ ಸಮಾವೇಶದಲ್ಲಿ ಆಯ್ಕೆಗೊಂಡ ಸಮಿತಿಯು ಮುಂದಿನ ಸಭೆಯಲ್ಲಿ ತೀರ್ಮಾನಿಸುತ್ತದೆ.

"ಕರ್ನಾಟಕ ರಾಜ್ಯ ಆಟೋರಿಕ್ಷಾ ಚಾಲಕರ ಸಂಘಟನಾ ಸಮಿತಿ" ಎಂಬ ಹೆಸರಿನಲ್ಲಿ ರಚನೆಯಾಗಿರುವ ಸಮಿತಿ ಕೆಳಕಂಡಂತಿದೆ.

ಅಧ್ಯಕ್ಷರು ಜಿ. ಸುಬ್ಬರಾವ್, ಬೆಂಗಳೂರು, ಉಪಾಧ್ಯಕ್ಷರು ಬಸವರಾಜ್ ಬೆಳ್ಳುಳ್ಳಿ ಹುಬ್ಬಳ್ಳಿ, ಕೆ.ಕೆ. ಮೂರ್ತಿ ಶಿವಮೊಗ್ಗ; ಪ್ರಧಾನ ಕಾರ್ಯದರ್ಶಿ ಎ. ವಿ. ರಮೇಶ್ ಬೆಂಗಳೂರು; ಸಹ ಕಾರ್ಯದರ್ಶಿಗಳು ವಿ. ರಮೇಶ್ ಹೆಗ್ಡೆ ಹಾಸನ ಕೆ. ಎನ್. ನಾಯಕ್ ಉ.ಕ, ಬಿ. ಎಸ್. ಬಾಬು ಕೊಡಗು, ಚೆಲುವರಾಜ್ ತುಮಕೂರು, ಖಜಾಂಚಿ ಕೆ. ಅಬೂಬಕರ್ ಮಂಗಳೂರು ಮತ್ತು 12 ಜನ ಕಾರ್ಯಕಾರಿ ಸಮಿತಿ ಸದಸ್ಯರನ್ನು ಆಯ್ಕೆ ಮಾಡಿದೆ. ಕಾ. ಪಿ. ರಾಮಚಂದ್ರರಾವ್, ಎಂ. ಎಲ್. ಎ. ರವರು ಸಲಹೆಗಾರರಾಗಿ ಆಯ್ಕೆ ಆದರು.

●

ಕನ್ನಡದ ಪ್ರಸಿದ್ಧ ನಾಟಕಕಾರ "ಶ್ರೀರಂಗ" ಮೃತ್ಯುವಶ

"ಶ್ರೀರಂಗ"ರೆಂದೇ ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ವಿಖ್ಯಾತರಾಗಿದ್ದ ಜನಪ್ರಿಯ ನಾಟಕಕಾರ ಆದ್ಯ ರಂಗಾಚಾರ್ಯರು ತಮ್ಮ 81 ನೇ ವಯಸ್ಸಿನಲ್ಲಿ ಅಕ್ಟೋಬರ್ 17 ರ ಬೆಳಗಿನಲ್ಲಿ ಮೃತ್ಯು ವಶರಾದರು.

ಬಿಜಾಪುರ ಜಿಲ್ಲೆಯ ಅಗರಖೇಡ ಎಂಬಲ್ಲಿ 1904 ರ ಸೆಪ್ಟೆಂಬರ್ 26 ರಂದು ಸಂಪ್ರದಾಯಸ್ಥ ಮನೆಯಲ್ಲಿ ಹುಟ್ಟಿದ ಅವರು ಅಂಧ ಶ್ರದ್ಧೆ, ಅರ್ಥಹೀನ ನಂಬಿಕೆಗಳ ವಿರುದ್ಧ ಪ್ರತಿಭಟಿಸಿ, ಬಹಿಷ್ಕಾರಕ್ಕೂ ಒಳಗಾಗಿದ್ದ ದಿಟ್ಟತನದ ವ್ಯಕ್ತಿ.

1975 ರ ತುರ್ತು ಪರಿಸ್ಥಿತಿ ಸಮಯದಲ್ಲಿ ಸರ್ವಾಧಿಕಾರದ ವಿರುದ್ಧ ದನಿಯೆತ್ತಿದ ಬರಹಗಾರರಲ್ಲಿ "ಶ್ರೀರಂಗ" ರೂ ಒಬ್ಬರು. ಅವರು ತಮಗನಿಸಿದ್ದನ್ನು ತಮ್ಮ ಓದುಗರೊಂದಿಗೆ ಹಂಚಿಕೊಂಡು ದಿಟ್ಟತನವನ್ನು ಪ್ರದರ್ಶಿಸಿದರು.

ಸುಮಾರು ಒಂದು ನೂರು ಸತ್ವಶಾಲಿ ನಾಟಕಗಳನ್ನು ರಚಿಸಿದ್ದ "ಶ್ರೀರಂಗ"ರು ಕಾದಂಬರಿ, ವಿಮರ್ಶೆ, ಪ್ರಬಂಧ, ಜೀವನ ಚರಿತ್ರೆ, ಅನುವಾದ ಸಾಹಿತ್ಯ ಹೀಗೆ ನಾನಾ ಕ್ಷೇತ್ರಗಳಲ್ಲಿ ದುಡಿದಿದ್ದರೂ ತಮ್ಮ ಭಾವಾಭಿವ್ಯಕ್ತಿಯ ಮಾಧ್ಯಮವನ್ನಾಗಿ ಆರಿಸಿಕೊಂಡಿದ್ದು ನಾಟಕಗಳನ್ನೇ.

ಐ. ಸಿ. ಎಸ್. ಪರೀಕ್ಷೆಗಾಗಿ ಲಂಡನ್ನಿಗೆ ತೆರಳಿದ್ದ ಶ್ರೀರಂಗರು ಅಲ್ಲಿ ಎಂ. ಎ. ಮಾಡಿ ಬ್ರಿಟೀಶ್ ಸಾಮ್ರಾಜ್ಯದ ಊಳಿಗಕ್ಕೆ ಸೇರುವ ಮನಸ್ಸಿಲ್ಲದೆ 1928 ರಲ್ಲಿ ಭಾರತಕ್ಕೆ ವಾಪಸ್ಸಾದರು.

1930 ರಿಂದ 18 ವರುಷಗಳ ಕಾಲ ಧಾರವಾಡದ ಕರ್ನಾಟಕ ಕಾಲೇಜಿನಲ್ಲಿ ಸಂಸ್ಕೃತದ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿದ ಇವರು ನಂತರ ಆಕಾಶವಾಣಿಯಲ್ಲಿ ನಾಟಕ ನಿರ್ಮಾಪಕರಾಗಿದ್ದರು.

ಪ್ರಗತಿಪರ ಚಿಂತನೆಯ ನಾಟಕಕಾರರಾಗಿ ಜನಪ್ರಿಯರಾಗಿದ್ದ "ಶ್ರೀರಂಗ"ರ ಮರಣ ಕನ್ನಡ ಸಾಹಿತ್ಯ ಕ್ಷೇತ್ರಕ್ಕೊಂದು ನಷ್ಟವಾಗಿ ಪರಿಣಮಿಸಿದೆ. ಮಾರ್ಕ್ಸ್‌ವಾದೀ ಕಮ್ಯೂನಿಸ್ಟ್ ಪಕ್ಷ ತನ್ನ ಸಂತಾಪವನ್ನು ವ್ಯಕ್ತಪಡಿಸುತ್ತದೆ.

ಬರ ಪರಿಹಾರಕ್ಕೆ ಒತ್ತಾಯ

[1ನೇ ಪುಟದಿಂದ]

ಬರಗಾಲಕ್ಕೆ ತುತ್ತಾಗ ಬಹುದಾದ ಪ್ರದೇಶಗಳಲ್ಲಿಯು ಕಾರ್ಯಕ್ರಮುಗಳನ್ನು ಕೈಗೊಳ್ಳುವ-ಬೇಕಾದಂಥ್ವ ವಿವರಣೆ ನೀಡಲು ಯಾವಾಗಲೂ ಹಾಜರಿರುವಾಗ, ಮಳೆಯ ಅಭಾವದ ಚಿನ್ಹೆಗಳನ್ನು ಕಂಡ ಕೂಡಲೇ ಅವುಗಳ ಆಧಾರದಿಂದ ಕೇಂದ್ರ ಸರಕಾರ ತಾನೇ ನಿರ್ಣಯ ಕೈಗೊಳ್ಳ ಬಹುದು. ಮಳೆಯ ಅಭಾವಕ್ಕೆ ತುತ್ತಾಗ ಬಹುದಾದ ಪ್ರದೇಶದ ಆಧಾರದ ಮೇಲಿಂದ ತಾನು ನಿರ್ಧರಿಸಿಕೊಂಡಿರುವ ಧನ ಸಹಾಯದಲ್ಲಿ ಮೊದಲಿನ ಕಂತನ್ನು ಕೇಂದ್ರ ಸರಕಾರ ಕೂಡಲೇ ಬಿಡುಗಡೆ ಮಾಡಬಹುದು. ರಾಜ್ಯ ಸರಕಾರ ತನ್ನ ವರದಿ ಸಲ್ಲಿಸಿದ ನಂತರ ಹೆಚ್ಚಿನ ಧನ ಸಹಾಯ ನೀಡಬಹುದು.

ತನ್ನ ಎರಡು ಮನವಿಗಳಲ್ಲಿ ರಾಜ್ಯ ಸರಕಾರವು ಈ ಸಾಲಿಗೆ ರೂ 178.00 ಕೋಟಿ ಧನ ಸಹಾಯವನ್ನು ಕೇಂದ್ರ ಸರಕಾರದಿಂದ ಬೇಡಿದೆ. ಕೇಂದ್ರ ಸರಕಾರ ಬರೇ ರೂ. 10 ಕೋಟಿ-ಮಂಜೂರು ಮಾಡಿದೆ. ರಾಜ್ಯದ ತುರ್ತು ಅಗತ್ಯಕ್ಕೆ ಇದು ತೀರಾ ಕಡಿಮೆಯಾಗಿದೆ. ಕೃಷಿ ಕಾರ್ಮಿಕರಿಗೆ ಕೆಲಸ ಕೊಡಿಸಲು, ಸಣ್ಣ ಮತ್ತು ಮಧ್ಯಮ ರೈತರಿಗೆ ಆಹಾರ, ನೀರು, ಪರಿಹಾರ ಒದಗಿಸಲು, ದನದ ಮೇವು. ಸಾಲಗಳನ್ನು ಕೊಡಿಸಲು ಕನಿಷ್ಟ ರೂ 50 ಕೋಟಿಯಾದರೂ ಕೂಡಲೇ ಬಿಡುಗಡೆ ಮಾಡಬೇಕೆಂದು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿಯ ರಾಜ್ಯ ಸಮಿತಿ ಒತ್ತಾಯ ಮಾಡುತ್ತದೆ.

ತಡವಾಗಿ ಬಂದ ಮಳೆಯನ್ನು ಕಂಡು ಈಗ ನಾವು ಬಚಾವಾದೆವೆಂದು ಕೇಂದ್ರ ಮತ್ತು ರಾಜ್ಯ ಸರಕಾರಗಳು ಭಾವಿಸಿದರೆ ಅದು ತಪ್ಪಾದೀತು. 1985-86 ರ ಮುಂಗಾರು ಬೆಳೆ ಬರುವ ತನಕ ಪರಿಹಾರ ಕಾರ್ಯಗಳನ್ನು ಮುಂದುವರಿಸಬೇಕು.

ಆಹಾರ ವಿತರಣೆ

ಸಾಕಷ್ಟು ಆಹಾರ ಧಾನ್ಯ ಮತ್ತು ಹಣವನ್ನು ಕರ್ನಾಟಕಕ್ಕೆ ಕೂಡಲೇ ರವಾನೆ ಮಾಡಿ 2000 ಜನ ಸಂಖ್ಯೆಗೆ ಒಂದರಂತೆ ಅಗ್ಗ ದರದ ಅಂಗಡಿ ತೆರೆದು ಸಾರ್ವಜನಿಕ ವಿತರಣೆಯ ವ್ಯವಸ್ಥೆ ಮಾಡಬೇಕು. ಪೇಟೆ ಮತ್ತು ಹಳ್ಳಿಗಳ ಅಂತರವಿಲ್ಲವೆ ಆಹಾರಧಾನ್ಯ, ಎಣ್ಣೆ, ಬಟ್ಟೆ ಮತ್ತಿತರ ಅತ್ಯಾವಶ್ಯಕ ವಸ್ತುಗಳನ್ನು ನ್ಯಾಯ ಬೆಲೆಯಲ್ಲಿ ಹಂಚಬೇಕು. ಸರ್ವ ಸಾಧಾರಣವಾಗಿ ಗ್ರಾಮಾಂತರ ಪ್ರದೇಶದಲ್ಲಿ ಆಹಾರ ಧಾನ್ಯ ಬೆಳೆಯುತ್ತವೆಂಬ ನೆವದಿಂದ ಪಟ್ಟಣಗಳಲ್ಲಿಯಷ್ಟೆ ಅಗ್ಗದರದ ಅಂಗಡಿಗಳ ಮೂಲಕ ಆಹಾರ ಧಾನ್ಯ ಕಡಿಮೆ ದರದಲ್ಲಿ ವಿತರಣೆ ಮಾಡಲಾಗುತ್ತಿದೆ. ಗ್ರಾಮಾಂತರ ಪ್ರದೇಶದ ಜನರಿಗೆ ಧಾನ್ಯ ಕೊಂಡುಕೊಳ್ಳುವ ಶಕ್ತಿ ಇದೆಯೇ ಎಂಬುದನ್ನು ಪರಿಗಣನೆಗೆ ತೆಗೆದುಕೊಳ್ಳುತ್ತಿಲ್ಲ. ಬರಗಾಲ ಪರಿಸ್ಥಿತಿ ಉಂಟಾದಾಗಲಾದರೂ ಗ್ರಾಮಾಂತರ ಪ್ರದೇಶಗಳಲ್ಲಿ ಕಡಿಮೆ ಬೆಲೆಯಲ್ಲಿ ಆಹಾರ ಧಾನ್ಯ ಸಿಗುವಂತಾಗಬೇಕು.

ಇದಲ್ಲದೆ ಗ್ರಾಮುಗಳ ಕೃಷಿ ಕೆಲಸಗಾರರಿಗೆ, ಬಡರೈತರಿಗೆ, ಕುಶಲ ಕೆಲಸಗಾರರಿಗೆ ಹಾಗೇಯೇ ಇತರ ಬಡ ಜನರಿಗೆ- ಯಾರು ತಮ್ಮ ದಿನದ ಗಳಿಕೆಯನ್ನು ಕಳೆದುಕೊಂಡಿದ್ದಾರೊ- ಸರಕಾರ ಕೆಲಸ ಒದಗಿಸುವ ತನಕ, ತಮ್ಮ ಉಪಜೀವನಕ್ಕೆ ಸಹಾಯವಾಗಲು ಸುಲಭ ಕಂತಿನಲ್ಲಿ ಸಾಲ ಒದಗಿಸಬೇಕು. ಬರಗಾಲ ಪೀಡಿತ ಪ್ರದೇಶಗಳಲ್ಲಿಯ ಎಲ್ಲ ಕರ, ಸರಕಾರಕ್ಕೆ ಸಲ್ಲತಕ್ಕ ಬಾಕಿ, ಬ್ಯಾಂಕುಗಳ ಸಾಲಗಳನ್ನೆಲ್ಲ ಕೂಡಲೇ ಅನಾಮತ್ತಿನಲ್ಲಿಡಬೇಕು. ಸರಕಾರಕ್ಕೆ ಸಲ್ಲತಕ್ಕ ಬಾಕಿ ಮತ್ತು ಕರಗಳನ್ನು ಮನ್ನಾ ಮಾಡಿ, ಹಾನಿಗೊಳಗಾದ ಬೆಳೆಯು ಪ್ರಾಮಾಣಕ್ಕನುಸಾರವಾಗಿ ಅದು ಶೇ 25 ಕ್ಕಿಂತ ಹೆಚ್ಚಗಿದ್ದರೆ, ಬ್ಯಾಂಕ್ ಸಾಲಗಳ ಮರುಪಾವತಿಗೆ ಪರಿಹಾರ ನೀಡಬೇಕು. ಮುಂದಿನ ಸಾಗುವಳಿಗೆ ಸಹಾಯವಾಗುವಂತೆ ಮಾಡಲು ಬೀಜ, ಗೊಬ್ಬರ, ಡೀಜಲ್, ಗಳನ್ನು ಅಗ್ಗದರದಲ್ಲಿ ಒದಗಿಸ ಬೇಕು, ಹಾಗೆಯೇ ಬೆಳೆ ಸಾಲಗಳನ್ನು ಕೊಡಿಸಬೇಕು.

[ಶಾಸಕರಾದ ಸೂರ್ಯನಾರಾಯಣ ರಾವ್ ಮತ್ತು ರಾಮಚಂದ್ರರಾವ್ ಅವರು ಬೆಂಗಳೂರಿಗೆ ಬಂದಿರುವ ಕೇಂದ್ರ ಅಧ್ಯಯನ ತಂಡಕ್ಕೆ ಸಲ್ಲಿಸಿದ ಮನವಿ]

ಏಜೆಂಟರ ಗಮನಕ್ಕೆ

ನಮ್ಮ ಪತ್ರಿಕೆಯ ಏಜೆಂಟರು ತಿಂಗಳಿನ ಬಿಲ್ಲನ್ನು ಪ್ರತಿ 10 ನೇ ತಾರೀಖಿನೊಳಗೆ ಕಳುಹಿಸಿಕೊಡಬೇಕು. ಈಗಾಗಲೇ ಬಾಕಿ ಇರುವ ಏಜೆಂಟರು ಶೀಘ್ರವಾಗಿ ಬಾಕಿ ಹಣವನ್ನು ಪಾವತಿ ಮಾಡಬೇಕು. ಇಲ್ಲದಿದ್ದಲ್ಲಿ ಬಾಕಿ ಇರುವ ಏಜೆಂಟರಿಗೆ ಪತ್ರಿಕೆ ಕಳುಹಿಸುವುದನ್ನು ನಿಲ್ಲಿಸಲಾಗುತ್ತದೆ.

ವ್ಯವಸ್ಥಾಪಕ

ಚುನಾವಣೆಗೆ ತಯಾರಿ

ತಾ|| 12-'0-84 ರಂದು ಮಂಗಳೂರು ಜಪ್ಪಬಪ್ಪಲ್ ಶಾಖೆಯು ಯು. ಜನಾರ್ಧನ ನಾಯಕರ ಅಧ್ಯಕ್ಷತೆಯಲ್ಲಿ ಸಭೆ ಸೇರಿತ್ತು.

ಕಾರ್ಯದರ್ಶಿ ಜಿ. ಗೋಪಾಲರವರು ಪ್ರದೇಶದ ಸಂಘಟನೆಯಕುರಿತು ಸಭೆಯಲ್ಲಿ ವಿವರಿಸಿದ ನಂತರ ಕಾ|| ಬಂಗೇರರವರು ಪಕ್ಷದ ಸಂಘಟನೆ ಅವಶ್ಯಕತೆಯನ್ನು ವಿವರಿಸಿ ಪಕ್ಷದ ಫಂಡನ್ನು ಯಶಸ್ವಿಗೊಳಿಸುವುದು ಪ್ರತಿ ಪಾರ್ಟಿ ಸದಸ್ಯರ ಆದ್ಯಕರ್ತವ್ಯಯವೆಂದು ಹೇಳಿದರು. ಮುಂಬರುವ ಲೋಕಸಭಾ ಚುನಾವಣೆಯ ಬಗ್ಗೆ ತಮ್ಮ ಪ್ರದೇಶಗಳಲ್ಲಿ ಸಿದ್ಧತೆಗಳನ್ನು ನಡೆಸಬೇಕೆಂದು ತೀರ್ಮಾನವಾಯಿತು. ಅಧ್ಯಕ್ಷರು ಶಾಖೆಗೆ ಹೆಚ್ಚಿನ ಸದಸ್ಯರನ್ನು ಸೇರಿಸಬೇಕೆಂದು ಹಾಗೂಪಾರ್ಟಿ ಶಿಸ್ತನ್ನು ಕಾಪಾಡಿ ಪಕ್ಷವನ್ನು ಬಲಗೊಳಿಸುವುದರೊಂದಿಗೆ ಜನಹಿತ ಕಾರ್ಯವನ್ನು ಮಾಡಬೇಕೆಂದು ಕೇಳಿಕೊಂಡರು, ಕಾಂ|| ಬಾಲಕೃಷ್ಣ ಶೆಟ್ಟಿ ವಂದಿಸಿದರು.

(1ನೇ ಪುಟದಿಂದ)

"ಪ್ರಾಯಶಃ ಚೀನಾ ಬಿಟ್ಟರೆ ಇಡೀ ಏಷ್ಯಾದಲ್ಲಿ ಇಂಥಹ ನಿರ್ಧಾರ ಎಲ್ಲೂ ಆಗಿಲ್ಲ. ಇಂದು ಅಕ್ಟೋಬರ್ 17 ಸೋವಿಯತ್ ನಾಡಿನಲ್ಲಿ ಕ್ರಾಂತಿಯ ಕಹಳೆ ಮೊಳಗಿದ ದಿನ" ವೆಂದು ಆನಂದ ವ್ಯಕ್ತ ಮಾಡಿದ್ದಾರೆ, ಪಂಚಾಯತ್ ರಾಜ್ಯ ಮಂತ್ರಿ ಅಬ್ದುಲ್ ನಜೀರ್ ಸಾಹೇಬರು.

ಮಾನವನ ಸುಲಿಗೆ ಬಂದಾಗ ಬೇಕಾದರೆ ಉತ್ಪಾದನಾ ಸಾಧನೆಗಳೆಲ್ಲ ಸಮಾಜದ ಸೊತ್ತಾಗಬೇಕೆಂದು ಮಾರ್ಕ್ಸ್‌ವಾದ-ಲೆನಿನ್‌ವಾದ ಸಾರಿ ಹೇಳುತ್ತದೆ. ಆ ಸಿದ್ಧಾಂತಕ್ಕನುಗುಣವಾಗಿ ರಷ್ಯಾದಲ್ಲಿ ಕ್ರಾಂತಿಯಾದ ಕೂಡಲೇ ಎಲ್ಲ ಕಾರ್ಖಾನೆ, ಭೂಮಿ, ಖಾಸಗಿ ಆಸ್ತಿಗಳೆಲ್ಲ ಕಾರ್ಮಿಕರ - ರೈತರ ಸೋವಿಯೆತ್ತಿಗೆ ಸೇರಿವೆ ಎಂದು ಲೆನಿನ್ನರು ಘೋಷಿಸಿ, ಕಾರ್ಮಿಕರುಕಾರ್ಖಾನೆಗಳ—ರೈತರು ಭೂಮಿಯ ಮಾಲಿಕರೆಂದು ಸಾರಿದರು. ಅದರಂತೆಯೇ ಚೀನಾ ದೇಶದಲ್ಲಿ ಕೂಡ ಕಮ್ಯುನಿಸ್ಟ್ ಪಕ್ಷದ ಮುಖಂಡತ್ವದ ಕ್ರಾಂತಿ ರೈತರಿಗೆ ಭೂಮಿಯನ್ನು ಪುಕ್ಕಟೆಯಾಗಿ ಹಂಚಿತು.

ಜನತಾ ಸರಕಾರದಲ್ಲಿ ಪುರೋಗಾಮಿ ವಿಚಾರ ಹೊಂದಿರುವ ನಜೀರ್ ಸಾಹೇಬರು ತಮ್ಮ ಸರಕಾರ ರೈತರಿಗೆ ಪುಕ್ಕಟೆಯಾಗಿ ಭೂಮಿ ಹಕ್ಕು ಕೊಡುತ್ತಿರುವಾಗ ರಷ್ಯಾ—ಚೀನಾ ಕ್ರಾಂತಿಯನ್ನು ನೆನಸಿರುವುದು ಸ್ವಾಗತಾರ್ಹ.

ಸರಕಾರದ ಈ ನಿರ್ಣಯವನ್ನು ಸ್ವಾಗತಿಸುತ್ತಾ, ಒತ್ತುವರಿ ಭೂಮಿಯಲ್ಲಿರುವ ರೈತರಿಗೂ, ಭೂಹೀನರಿಗೂ ವಸತಿ ಹೀನರಿಗೂ ಅವರಿರುವ ಜಾಗಗಳನ್ನು ಪುಕ್ಕಟೆಯಾಗಿ ಹಂಚಬೇಕೆಂದೂ, ಭೂಮಾಲಿಕರ ಹೆಚ್ಚುವರಿ ಭೂಮಿಯನ್ನೂ ಪುಕ್ಕಟೆಯಾಗಿ ಕೃಷಿ ಕಾರ್ಮಿಕರಿಗೆ, ಹರಿಜನ—ಗಿರಿಜನರಿಗೆ, ಬಡ ರೈತರಿಗೆ ಹಂಚಬೇಕೆಂದೂ ನಾವು ಕೇಳಿಕೊಳ್ಳುತ್ತೇವೆ.

ಗೂಂಡಾ ಧಾಳಿ : 28 ರಂದು ಪ್ರತಿಭಟನೆ

(1ನೇ ಪುಟದಿಂದ)

ಮುಷ್ಕರಕ್ಕೆ ಮೊದಲು ಮಾಡಿದು ಮಾತ್ರವಲ್ಲ ಸಿ. ಐ. ಟಿ. ಯು. ಸಂಘದ ಮೇಲೆ ಅಪಪ್ರಚಾರ ಪ್ರಾರಂಭಿಸಿದರು. ಸಿ. ಐ. ಟಿ. ಯು. ಸಂಘಕ್ಕೆ ಸೇರಿದವರನ್ನು ಕೆಲವೆಡೆ ಹೆದರಿಸಿ ಬೆದರಿಸುವುದಕ್ಕೂ ಮೊದಲು ಮಾಡಿದರು.

ಇಂಟಕ್‌ಗೆ ಸೇರಿದ ಸಂಘಗಳು 14-10-84 ರಂದು ಸುಳ್ಯದಲ್ಲಿ ಸಭೆ, ಮೆರವಣಿಗೆ ಕಾರ್ಯ ಕ್ರಮ ಹಾಕಿಕೊಂಡಿದ್ದವು. ಒಟ್ಟು ಸುಮಾರು ನೂರ ಇಪ್ಪತ್ತು ಜನರಷ್ಟಿದ್ದ ಮೆರವಣಿಗೆಯು ಸಾಗುತ್ತಿದ್ದಂತೆ ಪೇಟೆಯಲ್ಲಿ ದಾರಿಯುದ್ದಕ್ಕೂ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷ ಮತ್ತು ಅದರ ಮುಖಂಡರನ್ನು ಅವಹೇಳನ ಮಾಡುವ ಪ್ರಚೋದನಕಾರಿ ಘೋಷಣೆಗಳನ್ನು ಕೂಗುತ್ತಿದ್ದರು. ಅವರ ಮೆರವಣಿಗೆಯು ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ಕಛೇರಿಯೆದುರು ಸಾಗುತ್ತಿದ್ದಂತೆಯೇ ಪಕ್ಷದ ಕಛೇರಿಗೆ ಕಲ್ಲು ತೂರಲು ಪ್ರಾರಂಭಿಸಿದರು. ಆಗ ಘರ್ಷಣೆ ನಡೆಯಿತು. ಸಿ. ಪಿ. ಐ. [ಎಂ]ನಕಛೇರಿಯಲ್ಲಿದ್ದ ಐದಾರು ಮಂದಿ ಗೂಂಡಾ ಧಾಳಿಯನ್ನು ಧೈರ್ಯವಾಗಿ ಎದುರಿಸಿದರು. ಕಲ್ಲು ತೂರಾಟದಿಂದಾಗಿ ಪಕ್ಷದ ಕಛೇರಿ ಹಾಗೂ ಆಸುಪಾಸಿನ ಒಂದೆರಡು ರೂಮುಗಳಿಗೆ ಹಾನಿಯಾಯಿತು. ಘರ್ಷಣೆಯ ಸುದ್ದಿ ತಿಳಿದೊಡನೆಯೇ ಧಾವಿಸಿ ಬಂದ ನೂರಾರು ಮಂದಿ ಪಕ್ಷದ ಕಾರ್ಯಕರ್ತರು ಹಾಗೂ ಹಿತೈಷಿಗಳನ್ನು ಸಮಾಧಾನಪಡಿಸಿ ಕಳುಹಿಸಲಾಯಿತು.

ತಾರೀಕು 15 ರಂದು ತುರ್ತಾಗಿ ಕಾ. ಎಂ. ಕೆ. ಭಟ್ ಸಮ್ಮುಖದಲ್ಲಿ ಸಭೆ ಸೇರಿದ ಪಕ್ಷದ ಸುಳ್ಯ ತಾಲೂಕು ಸಮಿತಿಯು ಗೂಂಡಾ ಧಾಳಿಯನ್ನು ಉಗ್ರವಾಗಿ ಖಂಡಿಸಿತು. ಸುಳ್ಯ ತಾಲ್ಲೂಕಿನಲ್ಲಿ ತೀವ್ರವಾಗಿ ಪ್ರಭಾವಶಾಲಿಯಾಗಿ ಬೆಳೆಯುತ್ತಿರುವಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷ ಮತ್ತು ಸಾಮೂಹಿಕ ಸಂಘಟನೆಗಳ ಮೇಲೆ ಕಳಂಕ ತರಲು ಕಾಂಗ್ರೆ ಹಾಗೂ ಇಂಟಕ್ ಸಂಘಗಳು ನಡೆಸಿದ ಪೂರ್ವಯೋಜಿತ ಕುತಂತ್ರ ಇದು ಎಂದು ಅಭಿಪ್ರಾಯ ಪಟ್ಟು ಸಮಿತಿಯು ಅಕ್ಟೋಬರ್ 28 ರಂದು ಸುಳ್ಯದಲ್ಲಿ ಬೃಹತ್ ಪ್ರತಿಭಟನಾ ಮೆರವಣಿಗೆ ಮತ್ತು ಬಹಿರಂಗ ಸಭೆಗಳನ್ನು ನಡೆಸಲು ತೀರ್ಮಾನಿಸಿತು. ಸಂಘಟನಾ ಶಕ್ತಿಯನ್ನು ಪ್ರದರ್ಶಿಸುವುದರೊಂದಿಗೆ ರಾಜಕೀಯವಾಗಿ ಕಾಂಗ್ರೆಯ ತಂತ್ರಗಳನ್ನು ಬಯಲಿಗೆಳೆಯಲು ತೀರ್ಮಾನಿಸಿದ ಪಕ್ಷದ ತಾಲೂಕು ಸಮಿತಿಯು ಸಿಲೋನ್ ನಿರ್ವಾಸಿತರು ಮತ್ತು ಸ್ಥಳೀಯರೊಳಗೆ ಸಾಮರಸ್ಯ ಬೆಳೆಸಲು ಶ್ರಮಿಸಲು ತೀರ್ಮಾನಿಸಿತು.

ಭದ್ರಾವತಿ

ಹಮಾಲರ ಸಂಘ ರಚನೆ

ಕೈಗಾರಿಕಾ ಕೇಂದ್ರವಾದ ಭದ್ರಾವತಿಯಲ್ಲಿ ಜನರಲ್ ಎಂಪ್ಲಾಯೀಸ್ ಮತ್ತು ಹಮಾಲಿ ವರ್ಕರ್ಸ್ ಯೂನಿಯನ್ ಎಂಬ ಕಾರ್ಮಿಕ ಸಂಘಟನೆಯನ್ನು ಕಟ್ಟಿದ್ದಾರೆ. ಅದಕ್ಕೆ ಮಹಮ್ಮದ್ ರಫಿ ಸಾಬ್ ಅಧ್ಯಕ್ಷ, ಎ. ಗೋವಿಂದನ್ ಉಪಾಧ್ಯಕ್ಷರಾಗಿ, ಪುಟ್ಟುಸ್ವಾಮಿ ಪ್ರಧಾನ ಕಾರ್ಯದರ್ಶಿ, ಜುಮ್ಮಾಖಾನ, ಕಾರ್ಯದರ್ಶಿ, ಸುಕುಮಾರನ್ ಖಜಾಂಚಿ ಸಿದ್ದಪ್ಪ, ಖಾದರ್, ಮಾಧವನ್, ಅನ್ವರಖಾನ್, ಸಯ್ಯದ್ ಶಫಿ, ಅಹಮದ್ ಜಾನ್, ಅಬ್ದುಲ್‌ಮಜೀದ, ಸತ್ಯಪಾಲನ್ ಮತ್ತು ಸಿಂಗಯ್ಯ ಅವರನ್ನು ಕಮಿಟಿ ಸದಸ್ಯರಾಗಿ ಆರಿಸಲಾಯಿತು. ಈ ಸಂಘವನ್ನು ಸಿ. ಐ. ಟಿ. ಯು. ಗೆ ಸೇರಿಸಬೇಕೆಂದು ನಿರ್ಣಯಿಸಲಾಗಿದೆ. ○

"ಐಕ್ಯರಂಗ''ಕ್ಕೆ ಚಂದಾದಾರರಾಗಿರಿ

Printed & Published by P Ramachandra Rao by him on behalf of the Communist Party of India (Marxist) Karnataka State Committee, K V. Temple Street, Sultanpet, Bangalore-560052 Editoral and managerial office, L-56, K V. Temple Street. Sultanpet. B-53 Phone : 24154
Editor ; P. Ramachandra Rao
Managing Editor : N. K. Upadhyaya